بِسْمِ اللہِ الرَّحْمٰنِ الرَّحِیْمِ    نَحْمَدُهٗ وَنُصَلِّی عَلٰی رَسُوْلِہِ الْکَرِیْمِ    وَعَلٰی عَبْدِہِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 05 | ಸಂಚಿಕೆ: 43

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

24 ಅಕ್ಟೋಬರ್ 2024, 24 ಅಖಾ 1403 ಹಿಜರಿ ಶಮ್‌ಸಿ,
20 ರಬೀಉಸ್ಸಾನಿ 1445 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَسَخَّرَ لَكُمُ الَّيْلَ وَالنَّهَارَ ۙ وَالشَّمْسَ وَالْقَمَرَ ؕ وَالنُّجُوْمُ مُسَخَّرٰتٌۢ بِاَمْرِهٖ ؕ اِنَّ فِيْ ذٰلِكَ لَاٰيٰتٍ لِّقَوْمٍ يَّعْقِلُوْنَ ○

**(ಅನ್ನಹಲ್: 13)**

ಅಂದರೆ: ಇರುಳನ್ನೂ ಹಗಲನ್ನೂ ಸೂರ್ಯನನ್ನೂ ಚಂದ್ರನನ್ನೂ ಅವನು ನಿಮ್ಮ ಪ್ರಯೋಜನಕ್ಕಾಗಿ ವ್ಯವಸ್ಥೆಗೊಳಿಸಿದ್ದಾನೆ. ನಕ್ಷತ್ರಗಳನ್ನು ಸಹ ಅವನ ಆಜ್ಞೆಯನುಸಾರ ನಿಮ್ಮ ಪ್ರಯೋಜನಕ್ಕಾಗಿ ವ್ಯವಸ್ಥೆಗೊಳಿಸಲಾಗಿದೆ. ವಿವೇಕಶಾಲಿಗಳಿಗೆ ಖಂಡಿತವಾಗಿಯೂ ಅದರಲ್ಲಿ ದೃಷ್ಟಾಂತಗಳಿವೆ.

## ಪ್ರವಾದಿ ಮುಹಮ್ಮದ್[(ಸ)]ರವರ ಉಪದೇಶ

**ಕೊಡುಗೆ (ಹಿಬ) ಖರೀದಿಸಲು ನಿಷೇಧ**

{**2623**} ಹಝ್ರತ್ ಉಮರ್ ಬಿನ್ ಅಲ್–ಖತ್ತಾಬ್(ರ) ವರದಿ ಮಾಡುತ್ತಾರೆ: ನಾನು ಅಲ್ಲಾಹನ ಮಾರ್ಗದಲ್ಲಿ ಸವಾರಿ ಮಾಡಲು ಕುದುರೆಯನ್ನು ನೀಡಿದೆ, ಆದರೆ ಅದನ್ನು ಹೊಂದಿದ್ದವನು ಅದನ್ನು ಹಾಳು ಮಾಡಿದನು. ಆದ್ದರಿಂದ ನಾನು ಅವನಿಂದ ಅದನ್ನು ಖರೀದಿಸಲು ಬಯಸಿದ್ದೆ ಮತ್ತು ಅವನು ಅದನ್ನು ಅಗ್ಗವಾಗಿ ಮಾರುತ್ತಾನೆ ಎಂದು ನಾನು ಭಾವಿಸಿದೆ. ನಾನು ಅದರ ಬಗ್ಗೆ ಹಝ್ರತ್ ಪೈಗಂಬರ್(ಸ) ರನ್ನು ಕೇಳಿದೆ, ಅದಕ್ಕೆ ಅವರು(ಸ) ಹೇಳಿದರು: ಅವರು ನಿಮಗೆ ಒಂದು ದಿರ್ಹಮ್‌ನಲ್ಲಿ ನೀಡಿದರೂ ಅದನ್ನು ಖರೀದಿಸಬೇಡಿ, ಏಕೆಂದರೆ ತನ್ನ ದಾನ ಹಿಂದಿರುಗಿಸಿ ಪಡೆಯುವವನು ತನ್ನ ಸ್ವಂತ ವಾಂತಿಯನ್ನು ನೆಕ್ಕುವ ನಾಯಿಯಂತೆ ಇದ್ದಾನೆ.

**ಸಾಕ್ಷ್ಯ ನೀಡುವುದರ ಮೇಲೆ ತೀರ್ಪು**

{**2624**} ಹಝ್ರತ್ ಅಬ್ದುಲ್ಲಾ ಬಿನ್ ಉಬೈದುಲ್ಲಾ ಬಿನ್ ಅಬಿ ಮಲಿಕಾ ಅವರು ವರದಿ ಮಾಡುತ್ತಾರೆ, ಇಬ್ನೆ ಜದ್‌ಆನ್‌ನ ಗುಲಾಮನಾದ ಸುಹೈಬ್‌ನ ಮಕ್ಕಳು ಎರಡು ಶಯನಗೃಹಗಳನ್ನು (ಮಲಗುವ ಕೋಣೆಗಳು) ಮತ್ತು ಒಂದು ಬಚ್ಚಲು ಮನೆಯ ಬಗ್ಗೆ ವಾದಿಸಿದರು, ಆದ್ದರಿಂದ ಹಝ್ರತ್ ಪೈಗಂಬರ್(ಸ)ರು ಇದನ್ನು ಸುಹೈಬರಿಗೆ ನೀಡಿದಾಗ ಮರ್ವಾನ್ ಹೇಳಿದರು: ಯಾರಾದರೂ ನಿನಗಾಗಿ ಇದರ ಬಗ್ಗೆ ಸಾಕ್ಷಿ ಹೇಳುತ್ತಾರಾ? ಅದಕ್ಕೆ ಅವರು ಹೇಳಿದರು: (ಹಝ್ರತ್ ಅಬ್ದುಲ್ಲಾ) ಬಿನ್ ಉಮರ್(ರ). ಮರ್ವಾನ್ ಅವರನ್ನು ಕರೆದರು ಮತ್ತು ಹಝ್ರತ್ ಪೈಗಂಬರ್(ಸ)ರು ಸುಹೈಬ್‌ಗೆ ಎರಡು ಮಲಗುವ ಕೋಣೆಗಳು ಮತ್ತು ಬಚ್ಚಲು ಮನೆ ನೀಡಿದ್ದರು ಎಂದು ಅವರು ಸಾಕ್ಷ್ಯ ನೀಡಿದರು. ಆದ್ದರಿಂದ ಮರ್ವಾನ್ ಅವರ ಸಾಕ್ಷಿಯ ಆಧಾರದ ಮೇಲೆ ಹಝ್ರತ್ ಅಬ್ದುಲ್ಲಾರ ಪರವಾಗಿ ನಿರ್ಧರಿಸಿದರು.

**(ಸಹೀಹ್ ಅಲ್–ಬುಖಾರಿ, ಸಂಪುಟ–4, ಕಿತಾಬ್ ಅಲ್–ಹಿಬಾ)**

## ನಮಾಝಿನ ಸಮಯವನ್ನು ವ್ಯರ್ಥ ಸಮಯ ಎಂದು ಪರಿಗಣಿಸುವುದು ಅತ್ಯಂತ ಆಶ್ಚರ್ಯಕರ ಸಂಗತಿಯಾಗಿದೆ

ಇದರಲ್ಲಿ ಅನೇಕ ಪ್ರಯೋಜನಗಳು ಮತ್ತು ಒಳಿತಿವೆ, ಮತ್ತು ಇಡೀ ದಿನ ಮತ್ತು ಇಡೀ ರಾತ್ರಿ ನಿಷ್ಪ್ರಯೋಜಕ ಕ್ರೀಯೆ ಮತ್ತು ನಿಷ್ಪ್ರಯೋಜಕ ಮಾತುಗಳಲ್ಲಿ ಅಥವಾ ಆಟಗಳಲ್ಲಿ ವ್ಯರ್ಥವಾದರೆ, ಅದನ್ನು ಕಾರ್ಯನಿರತತೆ ಎಂದು ಕರೆಯಲಾಗುತ್ತದೆ.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ನಮಾಝ್ ನಿರ್ವಹಿಸುವುದು ಮತ್ತು 'ವಝೂ' (ಶುಚಿಸ್ನಾನ) ಮಾಡುವುದು ವೈದ್ಯಕೀಯ ಪ್ರಯೋಜನಗಳನ್ನು ಸಹ ಹೊಂದಿದೆ. ಪ್ರತಿದಿನ ಬಾಯಿ ತೊಳೆಯದೇ ಇದ್ದರೆ ಕಣ್ಣು ಬರುತ್ತದೆ ಎಂದು ವೈದ್ಯರು ಹೇಳುತ್ತಾರೆ ಇದು ನಝುಲುಲ್ ಮಾ ನ ಪ್ರಕರಣವಾಗಿದೆ. ಮತ್ತು ಅದರಿಂದ ಅನೇಕ ರೋಗಗಳು ಉದ್ಭವಿಸುತ್ತವೆ. ಹೀಗಾಗಿ 'ವಝೂ' (ಶುಚಿಸ್ನಾನ) ಮಾಡುವುದಕ್ಕೆ ಸಾವು ಏಕೆ ಸಂಭವಿಸುತ್ತದೆ ಎಂಬುದನ್ನು ವಿವರಿಸಿ. ಇದು ಎಂತಹ ಅದ್ಭುತ ಸಂಗತಿಯಾಗಿದೆ. ಬಾಯಿಯಲ್ಲಿ ನೀರನ್ನು ಹಾಕಿ ಬಾಯಿಮುಕ್ಕಳಿಸುವುದಾಗಿರುತ್ತದೆ. ಮಿಸ್ವಾಕ್ ಮಾಡುವುದರಿಂದ (ಹಲ್ಲುಜ್ಜುವುದರಿಂದ) ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸುತ್ತದೆ. ಮತ್ತು ಹಲ್ಲುಗಳು ಬಲವಾಗಿರುತ್ತವೆ ಮತ್ತು ಬಲವಾದ ಹಲ್ಲುಗಳು ಉತ್ತಮ ಅಗಿಯಲು ಮತ್ತು ಆಹಾರವನ್ನು ವೇಗವಾಗಿ ಜೀರ್ಣಿಸಿಕೊಳ್ಳಲು ಕಾರಣವಾಗುತ್ತವೆ. ನಂತರ ಮೂಗನ್ನು ಸ್ವಚ್ಛಗೊಳಿಸುವುದಾಗಿದೆ. ಯಾವುದೇ ದುರ್ವಾಸನೆ ಮೂಗಿಗೆ ಬಂದರೆ ಮೆದುಳು ತುಂಬಾ ಕೊಳೆಯಾಗುತ್ತದೆ. ಈಗ ಹೇಳಿ ಅದರಲ್ಲಿ ತಪ್ಪೇನಿದೆ. ಅದರ ನಂತರ ಅವನು ತನ್ನ ಅಗತ್ಯಗಳನ್ನು ಸರ್ವಶಕ್ತನಾದ ಅಲ್ಲಾಹನ ಕಡೆಗೆ ಕೊಂಡೊಯ್ಯುತ್ತಾನೆ. ಮತ್ತು ಅವರಿಗೆ ತಮ್ಮ ಬೇಡಿಕೆಗಳನ್ನು ಪ್ರಸ್ತುತಪಡಿಸಲು ಅವಕಾಶವನ್ನು ಪಡೆಯುತ್ತಾರೆ. ದುಆ (ಪ್ರಾರ್ಥನೆ) ಮಾಡಲು ಅವರಿಗೆ ಸಮಯ ಲಭಿಸುತ್ತದೆ. ನಮಾಝಿಗೆ ಹೆಚ್ಚೆಂದರೆ ಒಂದು ಗಂಟೆ ಸಮಯ ತೆಗೆದುಕೊಳ್ಳುತ್ತದೆ, ಆದರೂ ಕೆಲವು ನಮಾಝ್‌ಗಳನ್ನು ಹದಿನೈದು ನಿಮಿಷಗಳಿಗಿಂತ ಕಡಿಮೆ ಅವಧಿಯಲ್ಲಿ ನಿರ್ವಹಿಸಲಾಗುತ್ತದೆ. ನಮಾಝಿನ ಸಮಯವನ್ನು ವ್ಯರ್ಥ ಸಮಯ ಎಂದು ಪರಿಗಣಿಸುವುದು ಅತ್ಯಂತ ಆಶ್ಚರ್ಯಕರ ಸಂಗತಿಯಾಗಿದೆ. ಇದರಲ್ಲಿ ಅನೇಕ ಪ್ರಯೋಜನಗಳು ಮತ್ತು ಒಳಿತುಗಳಿವೆ, ಮತ್ತು ಇಡೀ ದಿನ ಮತ್ತು ಇಡೀ ರಾತ್ರಿ ನಿಷ್ಪ್ರಯೋಜಕ ಕ್ರೀಯೆ ಮತ್ತು ನಿಷ್ಪ್ರಯೋಜಕ ಮಾತುಗಳಲ್ಲಿ ಅಥವಾ ಆಟಗಳಲ್ಲಿ ವ್ಯರ್ಥವಾಗಿದ್ದರೆ, ಅದನ್ನು ಕಾರ್ಯನಿರತತೆ ಎಂದು ಕರೆಯಲಾಗುತ್ತದೆ. ದೃಢವಿಶ್ವಾಸ (ಈಮಾನ್) ಇರುತ್ತಿದ್ದರೆ, ದೃಢವಿಶ್ವಾಸ ಇರಲಿ ಕೇವಲ ವಿಶ್ವಾಸ ಮಾತ್ರ ಇರುತ್ತಿದ್ದರೆ, ಈ ಪರಿಸ್ಥಿತಿ ಏಕೆ ಸಂಭವಿಸುತ್ತಿತ್ತು ಮತ್ತು ಅದು ಏಕೆ ಈ ಹಂತವನ್ನು ತಲುಪುತ್ತಿತ್ತು?

ವಿಶ್ವಾಸದ (ಈಮಾನ್) ಸ್ಥಿತಿಯು ಇಷ್ಟರಮಟ್ಟಿಗೆ ಕುಸಿದಿದೆ ಎಂಬ ವಾಸ್ತವದ ಹೊರತಾಗಿಯೂ, ಯಾರಾದರೂ ಈ ದೌರ್ಬಲ್ಯವನ್ನು ಅನುಭವಿಸುವ ಮೂಲಕ ಅದನ್ನು ಗುಣಪಡಿಸಲು ಬಯಸಿದರೆ ಮತ್ತು ಒಬ್ಬ ವ್ಯಕ್ತಿಯು ದೇವರಿಂದ ಶಕ್ತಿ ಮತ್ತು ಧೈರ್ಯವನ್ನು ಪಡೆಯುವ ಮಾರ್ಗವನ್ನು ತೋರಿಸಲು

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

## *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2024ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129[ನೇ] (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

# ಖುತ್‌ಬ ಜುಮುಅ

ಹಝ್ರತ್ ಪೈಗಂಬರ್(ಸ) ಹೇಳಿದರು:

**ಅಬ್‌ಶಿರು ಯಾ ಮಾಶರಲ್‌ಮುಮಿನೀನ ಬಿನಸ್ರಿಲ್ಲಾಹಿ ತಆಲ ವ ಅವ್‌ನಿಹೀ–**

ಎಲ್ಲೈ ಸತ್ಯವಿಶ್ವಾಸಿಗಳ ಸಂಘವೇ, ಅಲ್ಲಾಹನ ಸಹಾಯ ಮತ್ತು ನೆರವಿನ ಜೊತೆಗೆ ಸಂತೋಷದಿಂದಿರಿ.

ನಂತರ ಅವರು ಹೇಳಿದರು: ನನಗೆ ದೃಢವಿಶ್ವಾಸವಿದೆ. ಒಂದು ಕಾಲ ಬರುವುದು. ಆಗ ನಾನು ಕಅ್‌ಬ ಭವನದ ಪರಿಕ್ರಮಣ ಮಾಡುವೆನು ಮತ್ತು ಅದರ ಕೀಲಿಗೈಗಳು ನನ್ನ ಕೈಗಳಲ್ಲಿ ಇರುವುವು ಹಾಗೂ ಇರಾನ್ ಮತ್ತು ರೋಮ್ ಸಾಮ್ರಾಜ್ಯಗಳು ಖಂಡಿತವಾಗಿಯೂ ನಾಶವಾಗುವುವು.

---

ಕೆಲವೊಮ್ಮ ನಮ್ಮ ಯುವಕರು ಅನ್ಯರ ಮಾತನ್ನು ಆಲಿಸಿ ಆ ಸಮಯದಲ್ಲಿ ಬನೂಖುರೈಝಾ ಅವರ ಮೇಲೆ ಏಕೆ ಹಿಂಸಿಸಲಾಯಿತು? ಎಂದು ಪ್ರಶ್ನಿಸುತ್ತಾರೆ. ಅವರು ಒಪ್ಪಂದವನ್ನು ಮುರಿದಿದ್ದರು, ಆದ್ದರಿಂದ ಅವರಿಗೆ ಶಿಕ್ಷೆ ವಿಧಿಸಲಾಯಿತು. ಹಝ್ರತ್ ಪೈಗಂಬರ್(ಸ) ಅವರಿಗೆ ಯಾವುದೇ ಅನ್ಯಾಯ ಮಾಡಲಿಲ್ಲ.

**ಅಹ್‌ಝಾಬ್ ಯುದ್ಧದ ಸಂದರ್ಭದಲ್ಲಿ ಆಹಾರದಲ್ಲಿ ಉಂಟಾದ ಅನುಗ್ರಹದ ಘಟನೆಗಳು, ಕಂದಕದ ಅಗಿಯುವಿಕೆಯ ಸಂದರ್ಭದಲ್ಲಿ ಕಪಟವಿಶ್ವಾಸಿಗಳ ಮತ್ತು ಸತ್ಯವಿಶ್ವಾಸಿಗಳ ಪರಿಸ್ಥಿತಿಗಳು, ಹಝ್ರತ್ ಪೈಗಂಬರ್(ಸ)ರ ಯುದ್ಧದ ಸಿದ್ಧತೆಗಳು, ಮುಸಲ್ಮಾನರ ಸಂಖ್ಯೆ, ಮದೀನಕ್ಕೆ ಅವಿಶ್ವಾಸಿಗಳ ಆಗಮನ ಮತ್ತು ಅದರ ನಂತರದ ಘಟನೆಗಳು ಅದೇ ರೀತಿ ಬನೂ ಖುರೈಝಾರ ದ್ರೋಹದ ವಿವರಾತ್ಮಕ ಪ್ರಸ್ತಾವನೆ**

ಇಂದಿನಿಂದ ಖುದ್ದಾಮುಲ್ ಅಹ್ಮದಿಯಾದ ಇಜ್ತಿಮಾ ಸಹ ಆರಂಭವಾಗುತ್ತಿದೆ..... ಖುದ್ದಾಮ್ ಈ ದಿನಗಳಲ್ಲಿ ಆಧ್ಯಾತ್ಮಿಕ ಮತ್ತು ಅರಿವಿನ ಮಟ್ಟವನ್ನು ವರ್ಧಿಸಲು ಪ್ರಯತ್ನಿಸಬೇಕು. ನಾನು ಗಮನ ಸೆಳೆದಿದ್ದ ಮತ್ತು ಮನವಿ ಮಾಡಿದ್ದ ಪ್ರಾರ್ಥನೆ ಮತ್ತು ದುರೂದಿನ ಕಡೆಗೆ ಈ ದಿನಗಳಲ್ಲಿ ವಿಶೇಷವಾದ ಗಮನ ನೀಡಿರಿ. ಸದಾ ಅವುಗಳನ್ನು ಪಠಿಸುತ್ತಿರಿ. ಸರ್ವಶಕ್ತನಾದ ಅಲ್ಲಾಹನು ಎಲ್ಲಾ ರೀತಿಯ ಪೈಶಾಚಿಕ ದಾಳಿಯಿಂದ ಪ್ರತಿಯೊಬ್ಬರನ್ನು ರಕ್ಷಿಸಲಿ.

---

ಇತ್ತೀಚಿಗೆ ನಿಧನ ಹೊಂದಿದ ನಾಲ್ಕು ದಿವಂಗತರಾದ ಮಾನ್ಯ ಹಬೀಬುರ್ ರಹ್ಮಾನ್ ಝೈರ್ವಿ ಸಾಹಿಬ್ ರಬ್ವಾ, ಡಾ॥ ಸೈಯದ್ ರಿಯಾಝುಲ್ ಹಸನ್ ಸಾಹಿಬ್, ಮಾನ್ಯ ಪ್ರೋಫೇಸರ್ ಅಬ್ದುಲ್ ಜಲೀಲ್ ಸಾದಿಖ್ ಸಾಹಿಬ್ ರಬ್ವಾ ಮತ್ತು ಮಾನ್ಯ ಮಾಸ್ಟರ್ ಮುನೀರ್ ಅಹ್ಮದ್ ಸಾಹಿಬ್ ಜಾಂಗ್‌ರ ಸದ್ಗುಣಗಳ ಪ್ರಸ್ತಾವನೆ ಮತ್ತು ನಮಾಝೆ ಜನಾಝ ಗ್ಹಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **20–09–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಅಹ್‌ಝಾಬ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ಅವರ ಜೀವನ ಚರಿತ್ರೆಯನ್ನು ಉಲ್ಲೇಖಿಸಲಾಗುತ್ತಿತ್ತು.

ಕಳೆದ ಖುತ್ಬದಲ್ಲಿ ನಾನು ಆಹಾರದಲ್ಲಿ ಉಂಟಾದ ಅನುಗ್ರಹದ ಪವಾಡವನ್ನು ವಿವರಿಸಿದ್ದೆ. ಅದೇ ರೀತಿಯಲ್ಲಿ ಖರ್ಜೂರಗಳಲ್ಲಿ ಉಂಟಾದ ಅನುಗ್ರಹದ ಪವಾಡದ ಬಗ್ಗೆಯೂ ಪ್ರಸ್ತಾಪವಿದೆ. ಹಝ್ರತ್ ಬಶೀರ್ ಬಿನ್ ಸಅದ್(ರ)ರ ಪುತ್ರಿ ವಿವರಿಸುತ್ತಾಳೆ: ನನ್ನ ತಾಯಿ ಅಮ್ರಹ್ ಬಿನ್ತ್ ರವಾಹ ನನ್ನ ಬಟ್ಟೆಯಲ್ಲಿ ಸ್ವಲ್ಪ ಖರ್ಜೂರವನ್ನು ಇರಿಸಿ ಅವುಗಳನ್ನು ನನ್ನ ತಂದೆ ಮತ್ತು ಮಾಮರಿಗೆ ಕೊಟ್ಟು ಬರಲು ಹೇಳಿದಳು. ಇದು ನಿಮ್ಮ ಬೆಳಿಗ್ಗಿನ ಆಹಾರವಾಗಿದೆ ಎಂದು ಅವರಿಗೆ ತಿಳಿಸಿ ಎಂದೂ ತಾಯಿ ಹೇಳಿದಳು. ನಾನು ಆ ಖರ್ಜೂರಗಳನ್ನು ಕೊಂಡು ಹೋಗಿ ನನ್ನ ತಂದೆ ಮತ್ತು ಮಾಮರನ್ನು ಹುಡುಕುತ್ತಾ ಹಝ್ರತ್ ಪೈಗಂಬರ್(ಸ)ರ ಸಮೀಪದಿಂದ ದಾಟಿಹೋದೆ. ಹಝ್ರತ್ ಪೈಗಂಬರ್(ಸ) ಕೇಳಿದರು: ಎಲ್ಲೈ ಹುಡುಗಿ, ನಿನ್ನ ಬಳಿ ಏನಿದೆ? ಇವು ಖರ್ಜೂರಗಳಾಗಿವೆ. ನನ್ನ ತಾಯಿ ಇದನ್ನು ನ್ನ ತಂದೆ ಬಶೀರ್ ಬಿನ್ ಸಅದ್ ಮತ್ತು ನನ್ನ ಮಾಮ ಅಬ್ದುಲ್ಲಾ ಬಿನ್ ರವಾಹ ಅವರಿಗಾಗಿ ಕಳುಹಿಸಿದ್ದಾಳೆ ಎಂದು ನಾನು ಉತ್ತರಿಸಿದೆ. ಈ ಖರ್ಜೂರಗಳನ್ನು ನನಗೆ ಕೊಡು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ನಾನು ಆ ಖರ್ಜೂರಗಳನ್ನು ಹಝ್ರತ್ ಪೈಗಂಬರ್(ಸ)ರ ಎರಡೂ ಕೈಗಳಲ್ಲಿ ಇರಿಸಿದೆ. ಹಝ್ರತ್ ಪೈಗಂಬರ್(ಸ) ಆ ಖರ್ಜೂರಗಳನ್ನು ಎರಡು ಬಟ್ಟೆಗಳಿಂದ ಮುಚ್ಚಿದರು. ಅನಂತರ ಎಲ್ಲರನ್ನು ತಿನ್ನಲಿಕ್ಕಾಗಿ ಬರಲು ಹೇಳಲು ಹಝ್ರತ್ ಪೈಗಂಬರ್(ಸ) ಒಬ್ಬ ವ್ಯಕ್ತಿಗೆ ಆದೇಶ ನೀಡಿದರು. ಕರೆಗೆ ಓಗೊಟ್ಟು ಎಲ್ಲರೂ ಬಂದರು ಮತ್ತು ಖರ್ಜೂರಗಳನ್ನು ತಿನ್ನಲು ತೊಡಗಿದರು. ಆ ಖರ್ಜೂರಗಳು ಅಧಿಕವಾಗಲು ತೊಡಗಿತು. ಕೊನೆಗೆ ಎಲ್ಲರೂ ತಿಂದಾದಾಗ ಖರ್ಜೂರಗಳು ಬಟ್ಟೆಗಳ ಅಂಚಿನಿಂದ ಬೀಳುತ್ತಿದ್ದುವು. (ಸೀರತ್ ಇಬ್ನೆ ಹಿಶಾಮ್, ಪುಟ–623–624, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಆಹಾರದಲ್ಲಿ ಅನುಗ್ರಹದ ಇನ್ನೂ ಹೆಚ್ಚಿನ ಘಟನೆಗಳಿವೆ. ಉಬೈದುಲ್ಲಾ ಬಿನ್ ಅಬಿ ಬುರ್ದಾ ವರದಿ ಮಾಡುತ್ತಾರೆ ಉಮ್ಮೆ ಆಮಿರ್ ಅಶ್‌ಹಲಿಯ ಅವರು ಹಝ್ರತ್ ಪೈಗಂಬರ್(ಸ) ಅವರಿಗೆ 'ಹೇಸ್' ಹೊಂದಿರುವ ಒಂದು ಪಾತ್ರೆಯನ್ನು ಕಳುಹಿಸಿದರು. 'ಹೇಸ್' ಎಂಬುದು ಖರ್ಜೂರ, ತುಪ್ಪ ಮತ್ತು ಪನ್ನೀರ್‌ನಿಂದ ತಯಾರಿಸಲ್ಪಡುವ ಆಹಾರವಾಗಿದೆ. ಹಝ್ರತ್ ಪೈಗಂಬರ್(ಸ)ರು ತಮ್ಮ ಡೇರೆಗೆ ಹಝ್ರತ್ ಉಮ್ಮೆ ಸಲಮ(ರ) ಅವರ ಬಳಿ ಹೋದರು. ಹಝ್ರತ್ ಉಮ್ಮೆ ಸಲಮಾ ಅವರು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಅದನ್ನು ಸೇವಿಸಿದರು, ನಂತರ ಹಝ್ರತ್ ಪೈಗಂಬರ್(ಸ)ರು ಆ ಪಾತ್ರೆಯೊಂದಿಗೆ ಹೊರಗೆ ಹೋದರು ಮತ್ತು ಹುಝೂರ್(ಸ) ಅವರ ಘೋಷಣೆ ಕೂಗುವನು ಊಟಕ್ಕಾಗಿ ಕರೆದಾಗ ಎಲ್ಲಾ ಕಂದಕದ ಜನರು ಬಂದು ಅದನ್ನು ಹೊಟ್ಟೆ ತುಂಬ ಸೇವಿಸಿದರು ಮತ್ತು ಆಹಾರವು ಮೊದಲಿನಂತೆಯೇ ಉಳಿದಿತ್ತು. (ಸ್‌ಬುಲ್ಲ್ ಹುದಾ ವಲ್–ರಶಾದ್, ಸಂಪುಟ–4, ಪುಟ–370, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಲುಗ್ಹಾತುಲ್ ಹದೀಸ್, ಸಂಪುಟ–1, ಪುಟ–542)

ಆಹಾರದಲ್ಲಿ ಉಂಟಾದ ಅನುಗ್ರಹದ ಮತ್ತೊಂದು ಘಟನೆಯನ್ನು ವಿವರಿಸಿದ ನಂತರ ಹಝ್ರತ್ ಮಸೀಹ್ ಮೌಊದ್(ರ)ರ ಲಿಖಿತಗಳಿಂದ ಸಾಲಿಕ್‌ನ ಸ್ಥಾನ ಮತ್ತು ಲಿಖಾದ (ದೇವದರ್ಶನ) ಪದವಿಗಳ ಕುರಿತು ಹುಝೂರ್ ಹೀಗೆ ಹೇಳಿದರು: ಬೆಂಕಿಯನ್ನಲ್ಲದೇ ಬೇರೇನನ್ನೂ ಕಾಣದ ರೀತಿಯಲ್ಲಿ ಬೆಂಕಿ ಲೋಹದ ಬಣ್ಣವನ್ನು ತನ್ನೊಳಗೆ ಅಡಗಿಸುತ್ತದೆ. ಅದೇ ರೀತಿಯಲ್ಲಿ ಸಾಲಿಕನು ದೇವನ ಸಾಮೀಪ್ಯವನ್ನು ಗಳಿಸುತ್ತಾನೆ. ಲಿಖಾದ ಈ ಪದವಿಯಲ್ಲಿ ಕೆಲವೊಮ್ಮೆ ಮನುಷ್ಯನಿಂದ ಮಾನುಷಿಕ ಶಕ್ತಿಗೂ ಮೀರಿದ ಕೆಲಸಗಳು ಪ್ರಕಟವಾಗುತ್ತವೆ. ಆತನು ತನ್ನೊಳಗೆ ದೈವಿಕ ಶಕ್ತಿಯನ್ನು ಇರಿಸಿಕೊಂಡಿರುತ್ತಾನೆ. ಉದಾಹರಣೆಗೆ ನಮ್ಮ ನೇತಾರ ಮತ್ತು ಪ್ರವಾದಿಗಳ

ಸರದಾರ ಹಝ್ರತ್ ಖಾತಮುಲ್ ಅಂಬಿಯಾ(ಸ) ಬದ್ರ್ ಯುದ್ಧದಲ್ಲಿ ಒಂದು ಮುಷ್ಟಿಯಷ್ಟು ಮರಳನ್ನು ಸತ್ಯನಿಷೇಧಿಗಳ ಕಡೆಗೆ ಎಸೆದರು. ಆ ಮುಷ್ಟಿಯಷ್ಟು ಮಣ್ಣನ್ನು ಯಾವುದೇ ದುಆದ ಮೂಲಕವಲ್ಲ ಬದಲಾಗಿ ತನ್ನ ಆಧ್ಯಾತ್ಮಿಕ ಶಕ್ತಿಯಿಂದ ಅವರು ಎಸೆದರು. ಆದರೆ ಆ ಮುಷ್ಟಿ ದೈವಿಕ ಶಕ್ತಿ ತೋರಿಸಿತು ಮತ್ತು ವಿರೋಧಿ ಸೇನೆಯ ಮೇಲೆ ಎಂತಹ ಅಸಾಧಾರಣವಾದ ಪ್ರಭಾವ ಉಂಟುಮಾಡಿತ್ತು ಎಂದರೆ, ಅದರ ಪ್ರಭಾವ ಉಂಟಾಗದ ಯಾರೂ ಅವರಲ್ಲಿ ಇರಲಿಲ್ಲ...... ಇದೇ ರೀತಿಯ ಬೇರೆಯೂ ಪವಾಡಗಳನ್ನು ಹಝ್ರತ್ ಪೈಗಂಬರ್(ಸ) ತನ್ನ ಸ್ವಂತ ಶಕ್ತಿಯಿಂದಲೇ ತೋರಿಸಿದ್ದರು. ಅದರ ಜೊತೆಗೆ ದುಆ ಇದ್ದಿರಲಿಲ್ಲ. ಅವರು(ಸ) ಅನೇಕ ಬಾರಿ ತಮ್ಮ ಬೆರಳುಗಳನ್ನು ಒಂದು ಬಟ್ಟಲಿನಲ್ಲಿ ಹಾಕುವ ಮೂಲಕ ಅದರಲ್ಲಿದ್ದ ಸ್ವಲ್ಪ ನೀರನ್ನು ಎಷ್ಟರ ಮಟ್ಟಿಗೆ ಹೆಚ್ಚಿಸಿದರು ಎಂದರೆ ಇಡೀ ಸೈನ್ಯ ಮತ್ತು ಒಂಟೆಗಳು ಮತ್ತು ಕುದುರೆಗಳು ಆ ನೀರನ್ನು ಕುಡಿದವು ತದನಂತರವೂ ಆ ನೀರು ಅದರ ಪ್ರಮಾಣದಲ್ಲಿಯೇ ಉಳಿದಿತ್ತು ಮತ್ತು ಅನೇಕ ಬಾರಿ ಎರಡು ನಾಲ್ಕು ರೊಟ್ಟಿಗಳ ಮೇಲೆ ಕೈ ಇರಿಸಿದ್ದರಿಂದ ಹಸಿದ ಬಾಯಾರಿದ ಸಾವಿರಾರು ಜನರ ಹೊಟ್ಟೆಯನ್ನು ತಣಿಸಿದರು ಮತ್ತು ಕೆಲವೊಮ್ಮೆ ಸ್ವಲ್ಪ ಹಾಲನ್ನು ತನ್ನ ತುಟಿಗಳಿಂದ ಅನುಗ್ರಹಿಸಿ ಒಂದು ಗುಂಪಿನ ಹೊಟ್ಟೆಯನ್ನು ತುಂಬಿಸಿದರು ಮತ್ತು ಕೆಲವೊಮ್ಮೆ ಅವರು ಒಂದು ಬಾವಿಯ ಕಹಿ ನೀರನ್ನು ತನ್ನ ಬಾಯಿಯ ಲಾಲಾರಸವನ್ನು ಆ ಬಾವಿಗೆ ಸುರಿದು, ಅದರ ನೀರನ್ನು ಸಿಗೊಳಿಸಿದರು ಮತ್ತು ಕೆಲವೊಮ್ಮೆ ತೀವ್ರವಾಗಿ ಗಾಯಗೊಂಡವರ ಮೇಲೆ ತಮ್ಮ ಕೈಯನ್ನು ಇರಿಸಿ ಅವರಿಗೆ ಸರಿಪಡಿಸಿದರು ಕೆಲವೊಮ್ಮೆ ಅವರು ಯುದ್ಧದಲ್ಲಿ ಗಾಯಗೊಂಡವರ ಕಣ್ಣುಗಳನ್ನು ತನ್ನ ಕೈಯ ಅನುಗ್ರಹದಿಂದ ಗುಣಪಡಿಸಿದರು. ಅದೇ ರೀತಿ ಅವರು ತಮ್ಮ ವೈಯಕ್ತಿಕ ಅಧಿಕಾರದಿಂದ ಗುಪ್ತ ದೈವಿಕ ಶಕ್ತಿಇಂದ ಅನೇಕ ಇತರ ಕೆಲಸಗಳನ್ನು ಮಾಡಿದರು. (ಆಯಿನಾ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಈನ್, ಸಂಪುಟ-5, ಪುಟ-65-66)

ಕಂದಕ ಅಗೆಯುವಿಕೆ ಸಂದರ್ಭದಲ್ಲಿ ಕಪಟವಿಶ್ವಾಸಿಗಳ ಹಾಗೂ ಸತ್ಯವಿಶ್ವಾಸಿಗಳ ಸ್ಥಿತಿಯನ್ನೂ ವಿವರಿಸಲಾಗಿದೆ. ಅದರ ವಿವರಣೆ ಹೀಗಿದೆ. ಇಬ್ನೆ ಇಸ್‌ಹಾಖ್ ಬರೆಯುತ್ತಾರೆ, ಅನೇಕ ಕಪಟವಿಶ್ವಾಸಿಗಳು ಹಝ್ರತ್ ಪೈಗಂಬರ್(ಸ) ಮತ್ತು ಮುಸ್ಲಿಮರ ಜೊತೆಗೆ ಇದ್ದುಕೊಂಡು ಅಗೆಯುವ ಕೆಲಸದಲ್ಲಿ ಮಡಿವಂತಿಕೆ ತೋರಿಸಿದರು. ಅವರು ಸ್ವಲ್ಪ ಕೆಲಸ ಮಾಡುತ್ತಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ರೊಡನೆ ಹೇಳದೇ ಮತ್ತು ಅನುಮತಿ ಕೇಳದೇ ಕಣ್ಣು ತಪ್ಪಿಸಿ ಮನೆಗಳಿಗೆ ಹೋಗುತ್ತಿದ್ದರು. ಆದರೆ ಸತ್ಯವಿಶ್ವಾಸಿಗಳಿಗೆ ಏನಾದರೂ ಅಗತ್ಯ ಬರುವುದಾದರೆ ಅವರು ಹಝ್ರತ್ ಪೈಗಂಬರ್(ಸ)ರಿಂದ ಅನುಮತಿ ಕೇಳುತ್ತಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ಅವರಿಗೆ ಅನುಮತಿ ಕೊಡುತ್ತಿದ್ದರು. ಮತ್ತು ಅವರು ತಮ್ಮ ಅಗತ್ಯಗಳನ್ನು ಪೂರೈಸಿದ ತಕ್ಷಣ ಹಿಂತಿರುಗುತ್ತಿದ್ದರು.

(ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟ-370, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್)

ಯುದ್ಧಕ್ಕೆ ಹಝ್ರತ್ ಪೈಗಂಬರ್(ಸ)ರ ಸಿದ್ಧತೆಯ ಹೆಚ್ಚಿನ ವಿವರಗಳನ್ನು ಸಹ ವಿವರಿಸಲಾಗಿದೆ. ಅದರ ಬಗ್ಗೆ ಬರೆಯಲಾಗಿದೆ ವರದಿಗಳ ಪ್ರಕಾರ ಅಬೂಸುಫ್‌ಯಾನಿನ ಸೇನೆಯ ಆಗಮನಕ್ಕೆ ಮೂರು ದಿನಗಳಿಗೆ ಮುಂಚಿತವಾಗಿ ಕಂದಕ ತಯಾರಾಗಿತ್ತು. ಈಗ ಯೋಜನೆಯ ಪ್ರಕಾರ ಮಕ್ಕಳು ಮತ್ತು ಯುವಕರನ್ನು ಆ ಕೋಟೆಗಳ ಕಡೆಗೆ ಕಳುಹಿಸಲಾಯಿತು. ಅಲ್ಲಿ ಮಹಿಳೆಯರನ್ನು ಸಂರಕ್ಷಣೆಗಾಗಿ ಸ್ಥಳಾಂತರಿಸಲಾಗಿತ್ತು. ಆದರೆ ಬೇಕಾದರೆ ಅಲ್ಲೇ ಇರಲು ಅಥವಾ ಕೋಟೆಗಳ ಕಡೆಗೆ ಹೋಗಲು ಯುವಕರಲ್ಲಿ 15 ವರ್ಷಕ್ಕೆ ಮೇಲ್ಪಟ್ಟವರಿಗೆ ಅನುಮತಿ ಕೊಡಲಾಗಿತ್ತು. ಯುದ್ಧದಲ್ಲಿ ಭಾಗವಹಿಸಲು ಅನುಮತಿ ನೀಡಲಾದ ಅಂತಹ ಯುವಕರಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ), ಹಝ್ರತ್ ಝೈದ್ ಬಿನ್ ಸಾಬಿತ್(ರ), ಹಝ್ರತ್ ಅಬು ಸಈದ್ ಖುದ್ರಿ(ರ) ಮತ್ತು ಹಝ್ರತ್ ಬಾರಾ ಬಿನ್ ಅಝಿಬ್(ರ) ಸೇರಿದ್ದರು. (ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟ-371, ದಾರುಲ್ ಕುತುಬ ಇಲ್‌ಮಿಯಾ ಬೈರುತ್) (ಗಜ್ವಾ ಅಹ್‌ಝಾಬ್ ಬಶ್ಮೀಲ್, ಪುಟ-175, ನಫೀಸ್ ಅಕಾಡೆಮಿ ಕರಾಚಿ) (ವಿಕಿಪೀಡಿಯಾ, ಘಜ್ವಾ ಖಂದಕ್)

ಇಬ್ನೆ ಹಿಶಾಮ್‌ರ ಹೇಳಿಕೆಯ ಪ್ರಕಾರ ಹಝ್ರತ್ ಪೈಗಂಬರ್(ಸ)ರು ಮದೀನದಲ್ಲಿ ಉಮ್ಮೇ ಮಕ್ತೂಮ್(ರ) ಅವರನ್ನು ತನ್ನ ಪ್ರತಿನಿಧಿಯನ್ನಾಗಿ ಮಾಡಿದ್ದರು. ಮತ್ತು ಅವರು(ಸ) 'ಸಲ್‌ಅ' ಪರ್ವತದ ಮುಂದೆ ತಮ್ಮ ಡೇರೆಯನ್ನು ಹೂಡಿದರು. 'ಸಲ್‌ಅ' ಮದೀನದ ಉತ್ತರ ದಿಕ್ಕಿನಲ್ಲಿರುವ ಪರ್ವತದ ಹೆಸರಾಗಿದೆ, ಪ್ರಸ್ತುತ ಕಾಲದಲ್ಲಿ ಮಸ್ಜಿದೆ ನಬವಿಯಿಂದ ಸುಮಾರು 15 ಕಿಲೋಮೀಟರ್ ದೂರದಲ್ಲಿದೆ ಎಂದು ಹೇಳಲಾಗುತ್ತದೆ. ಆ ಪರ್ವತವನ್ನು ತಮ್ಮ ಹಿಂದೆ ಇರಿಸಿ ಕಂದಕವನ್ನು ತಮ್ಮ ಮುಂದೆ ಇರಿಸಿದರು ಮತ್ತು ನಿಮ್ಮ(ಸ) ಸೈನ್ಯವು ಕೂಡ ಅಲ್ಲುಯೇ ಇತ್ತು. ಮತ್ತು ಆ ಕಂದಕದ ಬಳಿ ಹಝ್ರತ್ ಪೈಗಂಬರ್(ಸ)ರಿಗಾಗಿ ಚರ್ಮದ ಡೇರೆಯನ್ನು ಹಾಕಲಾಗಿತ್ತು. ಮುಹಾಜಿರರ ಧ್ವಜ ಹಝ್ರತ್ ಝೈದ್ ಬಿನ್ ಹಾರಿಸ(ಸ) ಮತ್ತು ಅನ್ಸಾರರ ಧ್ವಜ ಹಝ್ರತ್ ಸಅದ್ ಬಿನ್ ಉಬಾದ(ರ)ರ ಬಳಿಯಲ್ಲಿತ್ತು. (ಸಬ್ಲುಲ್ ಹುದಾ ವಲ್ ರಶಾದ್, ಸಂಪುಟ-4, ಪುಟ-371, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ವಿಕಿಪೀಡಿಯಾ, ಸಲ್‌ಅ ಪರ್ವತ)

ಮುಸ್ಲಿಮರ ಸಂಖ್ಯೆಯ ಕುರಿತು ಚರಿತ್ರೆಗಾರರಲ್ಲಿ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಕೆಲವರ ಪ್ರಕಾರ, ಈ ಸಂಖ್ಯೆ ಒಂಭೈನೂರಕ್ಕಿಂತ ಹೆಚ್ಚಿಲ್ಲ, ಮತ್ತು ಕರಲವರ ಪ್ರಕಾರ, ಇದು ಏಳು ನೂರಾಗಿತ್ತು. ಮತ್ತು ಕೆಲವರ ಪ್ರಕಾರ ಎರಡು ಸಾವಿರವಾಗಿತ್ತು ಮತ್ತು ಕರಲವರ ಪ್ರಕಾರ ಮೂರು ಸಾವಿರ ಆಗಿತ್ತು.

(ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟ-371, ದಾರುಲ್-ಕುತುಬ್ ಇಲ್‌ಮಿಯಾ ಬೈರುತ್) (ಘಝ್ವಾ ಅಹ್‌ಝಾಬ್, ಲೇಖಕರು- ಬಾಶ್ಮಿಲ್, ಪುಟ-178, ನಫೀಸ್ ಅಕಾಡೆಮಿ, ಕರಾಚಿ) (ಸಹೀಹ್ ಮಿನ್ ಸೀರತ್-ಉಲ್-ನಬಿ(ಸ), ಸಂಪುಟ-10, ಪುಟ-297, ಸಂಪುಟ-10) (ಸೀರತ್ ಇನ್‌ಸೈಕ್ಲೋಪೀಡಿಯಾ, ಪುಟ-300, ದಾರುಸ್ಸಲಾಮ್)

ವಿವಿಧ ಸ್ಥಳಗಳಲ್ಲಿ ಮುಸ್ಲಿಮರ ವಿವಿಧ ಸಂಖ್ಯೆಯನ್ನು ಹೇಳಲಾಗಿದೆ, ಈ ಸಂಖ್ಯೆಯನ್ನು ವಿವರಿಸಲು ಇತಿಹಾಸಕಾರರು ಸಾಕಷ್ಟು ಕಷ್ಟಪಟ್ಟಿದ್ದಾರೆ. ಅವರು ಈ ಸಂಖ್ಯೆಯನ್ನು ನಮೂದಿಸಿದಾಗ, ಅವರು ಒಂದು ವರದಿಯನ್ನು ಆದ್ಯತೆ ನೀಡಿ ಮತ್ತು ಉಳಿದ ವರದಿಗಳನ್ನು ತಪ್ಪು ಎಂದು ಘೋಷಿಸುತ್ತಾರೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಬಹಳ ಬುದ್ಧಿವಂತಿಕೆಯಿಂದ ಈ ಎಲ್ಲ ವರದಿಗಳನ್ನು ಹೊಂದಾಣಿಕೆಗೊಳಿಸಿ ಹೀಗೆ ಹೇಳುತ್ತಾರೆ: "ಈ ಸಂದರ್ಭದಲ್ಲಿ, ಮುಸ್ಲಿಂ ಸೈನ್ಯದ ಸಂಖ್ಯೆ ಹನ್ನೆರಡು ಎಂಬುದರಲ್ಲಿ ಇತಿಹಾಸಕಾರರಲ್ಲಿ ಬಲವಾದ ಭಿನ್ನಾಭಿಪ್ರಾಯವಿದೆ. ಕೆಲವರು ಈ ಸೈನ್ಯದ ಸಂಖ್ಯೆಯನ್ನು ಮೂರು ಸಾವಿರ ಎಂದು ಬರೆದಿದ್ದಾರೆ, ಕೆಲವರು ಹನ್ನೆರಡು, ಹದಿಮೂರು ನೂರು ಮತ್ತು ಕೆಲವರು ಏಳುನೂರು ಎಂದು ಬರೆದಿದ್ದಾರೆ. ಇದು ತುಂಬಾ ದೊಡ್ಡ ವ್ಯತ್ಯಾಸವಾಗಿದ್ದು, ಅದನ್ನು ಅರ್ಥೈಸಲು ಕಷ್ಟಕರವೆಂದು ತೋರುತ್ತದೆ ಮತ್ತು ಇತಿಹಾಸಕಾರರು ಅದನ್ನು ಪರಿಹರಿಸಲು ಸಾಧ್ಯವಾಗಲಿಲ್ಲ. ಆದರೆ ನಾನು ಅದರ ವಾಸ್ತವತೆಯನ್ನು ತಂದಿದ್ದೇನೆ ಮತ್ತು ಎಲ್ಲಾ ಮೂರು ರೀತಿಯ ವರದಿಗಳು ಸರಿಯಾಗಿವೆ.

ಉಹುದ್ ಯುದ್ಧದಲ್ಲಿ ಕಪಟವಿಶ್ವಾಸಿಗಳು ಹಿಂದಿರುಗಿದ ನಂತರ, ಮುಸ್ಲಿಮರ ಸೈನ್ಯವು ಕೇವಲ ಏಳುನೂರು ಜನರನ್ನು ಒಳಗೊಂಡಿತ್ತು ಎಂದು ಹೇಳಲಾಗಿದೆ. ಅಹ್‌ಝಾಬ್ ಯುದ್ಧವು ಕೇವಲ ಎರಡು ವರ್ಷಗಳ ನಂತರ ನಡೆಯಿತು ಮತ್ತು ಈ ಅವಧಿಯಲ್ಲಿ ಯಾವುದೇ ಪ್ರಮುಖ ಗೋತ್ರವು ಇಸ್ಲಾಂ ಧರ್ಮವನ್ನು ಸ್ವೀಕರಿಸಿ ಮದೀನಾದಲ್ಲಿ ನೆಲೆಸಲಿಲ್ಲ. ಆದ್ದರಿಂದ, ಏಳುನೂರು ಜನರು ಇದ್ದಕ್ಕಿದ್ದಂತೆ ಮೂರು ಸಾವಿರ ಆಗಲು ಸಾಧ್ಯವಿಲ್ಲ." ಇನ್ನೊಂದೆಡೆ, ಉಹುದ್ ನಂತರ ಎರಡು ವರ್ಷಗಳ ನಂತರ, ಇಸ್ಲಾಂ ಧರ್ಮದ ಪ್ರಗತಿಯ ಹೊರತಾಗಿಯೂ, ಉಹುದ್ ಸಮಯದಲ್ಲಿ ಇದ್ದಂತೆಯೇ ಹೋರಾಡುವ ಮುಸ್ಲಿಮರ ಸಂಖ್ಯೆಯು ಒಂದೇ ಆಗಿರುತ್ತದೆ." ಆದ್ದರಿಂದ, ಈ ಎರಡು ಟೀಕೆಗಳ ನಂತರ, ಅಹ್‌ಝಾಬ್ ಯುದ್ಧದ ಸಮಯದಲ್ಲಿ ಸುಮಾರು ಹನ್ನೆರಡು ನೂರು ಮುಸ್ಲಿಮರು ಹೋರಾಡಲು ಸಮರ್ಥರಾಗಿದ್ದರು ಎಂಬ ವರದಿಯು ಸರಿಯಾಗಿದೆ ಎಂದು ತೋರುತ್ತದೆ.

ಯಾರೋ 3000 ಬರೆದಿದ್ದಾರೆ ಮತ್ತು 700 ಬರೆದಿದ್ದಾರೆ ಎಂಬ ಪ್ರಶ್ನೆ ಈಗ ಉಳಿದುಕೊಂಡಿದೆ? ಅದಕ್ಕೆ ಉತ್ತರವೇನೆಂದರೆ ಈ ಎರಡು ವರದಿಗಳನ್ನು ವಿಭಿನ್ನ ಪರಿಸ್ಥಿತಿಗಳು ಮತ್ತು ಸಿದ್ಧಾಂತಗಳ ಅಡಿಯಲ್ಲಿ ವಿವರಿಸಲಾಗಿದೆ. ಅಹ್‌ಝಾಬ್ ಯುದ್ಧದ ಮೂರು ಭಾಗಗಳಿದ್ದುವು. ಅದರ ಒಂದು ಭಾಗವು ಶತ್ರುಗಳು ಮದೀನದ ಮುಂದೆ ಬಂದಿರದ ವೇಳೆ ಮತ್ತು ಕಂದಕವನ್ನು ಅಗೆಯುವ ಸಮಯದ್ದಾಗಿತ್ತು. ಈ ಕೆಲಸದಲ್ಲಿ ಕನಿಷ್ಠ ಪಕ್ಷ ಮಣ್ಣು ಹಾಕುವ ಕೆಲಸವನ್ನು ಮಕ್ಕಳು ಮತ್ತು ಮಹಿಳೆಯರು ಕೂಡ ಮಾಡಬಹುದಾಗಿತ್ತು. ಆದ್ದರಿಂದ ಕಂದಕವನ್ನು ಅಗೆಯುವ ಕೆಲಸದ ಸಮಯದಲ್ಲಿ ಮುಸ್ಲಿಮ್ ಸೇನೆಯಲ್ಲಿ ಮೂರು ಸಾವಿರ ಜನರಿದ್ದರು. ಅದರಲ್ಲಿ ಮಕ್ಕಳೂ ಸೇರಿದ್ದರು, ಮಹಿಳೆ ಸಹಾಬಿಯರ ಉತ್ಸಾಹವನ್ನು ನೋಡಿ ಈ ಸಂಖ್ಯೆಯಲ್ಲಿ ಕಂದಕವನ್ನು ಅಗೆಯದೆ ಇರುವ ಮಹಿಳೆಯರೂ ಸೇರಿದ್ದರು ಎನ್ನಬಹುದು. ಆ ಮಹಿಳೆಯರು ಅನ್ಯ ಕಾರ್ಯಗಳಲಿ ತೊಡಗಿದ್ದಿರಬಹುದು. ಇದು ನನ್ನ ಕಲ್ಪನೆಯಲ್ಲ," ಹಝ್ರತ್ ಮುಸ್ಲಿಹ್ ಮೌಊದ್(ರ) ಮುಂದೆ ಹೇಳುತ್ತಾರೆ ಇದು ನನ್ನ ಅಭಿಪ್ರಾಯವಲ್ಲ ಬದಲಿಗೆ "ಇತಿಹಾಸದಿಂದಲೂ ನನ್ನ ಈ ಅಭಿಪ್ರಾಯವೂ ದೃಢೀಕರಣವಾಗುತ್ತದೆ. ಹೀಗೆ ಕಂದಕ ಅಗೆಯುವ ಸಮಯ ಬಂದಾಗ ಹುಡುಗರೆಲ್ಲ ಕೂಡಿಸಲಾಯಿತು, ಅವರೆಲ್ಲರು ಹಿರಿಯರಾಗಲಿ, ಕಿರಿಯರಾಗಲಿ ಎಲ್ಲರು

ಕಂದಕ ಅಗೆಯುವಲ್ಲಿ ಸಹಾಯ ಮಾಡಲು ದುಡಿಯುತ್ತಿದ್ದರು ಎಂದು ಬರೆಯಲಾಗಿದೆ. ಅನಂತರ ಶತ್ರುಗಳು ಬಂದಾಗ ಮತ್ತು ಯುದ್ಧ ಆರಂಭವಾದಾಗ ಹದಿನೈದು ವರ್ಷಕ್ಕಿಂತ ಕಡಿಮೆ ಪ್ರಾಯದ ಹುಡುಗರೊಡನೆ ಮರಳಿ ಹೋಗಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದರು. ಹದಿನೈದು ವರ್ಷ ಪ್ರಾಯದವರೊಡನೆ ಬೇಕಾದರೆ ಇರಲು ಅಥವಾ ಹೋಗಬೇಕಾದರೆ ಹೋಗಲು ಅನುಮತಿ ನೀಡಲಾಯಿತು.

ಕಂದಕವನ್ನು ಅಗೆಯುವ ಸಮಯದಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಿತ್ತು ಮತ್ತು ಯುದ್ಧದ ಸಮಯದಲ್ಲಿ ಕಡಿಮೆಯಿತ್ತು ಎಂದು ಈ ವರದಿಯಿಂದ ಗೊತ್ತಾಗುತ್ತದೆ. ಏಕೆಂದರೆ ಚಿಕ್ಕ ಪ್ರಾಯದ ಮಕ್ಕಳನ್ನು ಹಿಂದಿರುಗಲು ಆದೇಶಿಸಲಾಯಿತು. ಆದ್ದರಿಂದ 3,000 ಅನ್ನು ಉಲ್ಲೇಖಿಸುವ ವರದಿಗಳು ಸಣ್ಣ ಮಕ್ಕಳನ್ನು ಒಳಗೊಂಡಿರುವ ಕಂದಕ ಅಗೆಯುಮ ಸಮಯದ ಸಂಖ್ಯೆಯನ್ನು ಸೂಚಿಸುತ್ತವೆ ಮತ್ತು ನಾನು ಇತರ ಯುದ್ಧಗಳಿಂದ ನಿರ್ಣಯಿಸಿರುವಂತೆ, ಕೆಲವು ಮಹಿಳೆಯರು ಸಹ ಮಹಿಳೆಯರನ್ನು ಒಳಗೊಂಡಿರುವ ವರದಿಗಳಲ್ಲಿ ಕಂಡುಬರುತ್ತದೆ, 1200ರ ಸಂಖ್ಯೆ ಯುದ್ಧ ಆರಂಭವಾದ ಸಮಯದ್ದಾಗಿದೆ ಮತ್ತು ಕೇವಲ ವಯಸ್ಕರು ಮಾತ್ರ ಉಳಿದಿದ್ದರು.

ಈಗ ಪ್ರಶ್ನೆ ಏನೆಂದರೆ ಮೂರನೆಯದು ಏಳುನೂರು ಸೈನಿಕರು ಹೇಳುವ ವರದಿಯು ಸರಿಯೇ? ಮೂರು ಸಾವಿರದಿಂದ ಹನ್ನೆರಡು ನೂರರ ತನಕ ಒಪ್ಪಿಕೊಂಡೆವು. ಈಗ ಏಳುನೂರಿನ ವರದಿಯು ಸರಿಯೇ ಎಂದು ನೋಡಬೇಕಿದೆ. ಅದರ ಉತ್ತರವೇನೆಂದರೆ ಈ ಹದೀಸ್ ಅನ್ನು ಇತಿಹಾಸಕಾರರಾದ ಇಬ್ನ್ ಇಸ್‌ಹಾಕ್ ಹೇಳಿದ್ದಾರೆ ಮತ್ತು ಅವರು ಅತ್ಯಂತ ವಿಶ್ವಾಸಾರ್ಹ ಇತಿಹಾಸಕಾರರಾಗಿದ್ದಾರೆ ಮತ್ತು ಇಬ್ನ್ ಹಝ್ಮ್ ಅವರಂತಹ ಮಹಾನ್ ವಿದ್ವಾಂಸರು ಅದನ್ನು ಬಲವಾಗಿ ದೃಢಪಡಿಸಿದ್ದಾರೆ. ಆದ್ದರಿಂದ ಇದರಲ್ಲಿ ಯಾವುದೇ ಸಂದೇಹವಿಲ್ಲ." ಇದೂ ಕೂಡ ಸರಿಯಾಗಿದೆ. "ಮತ್ತು ಇದು ಇತಿಹಾಸದ ಹೆಚ್ಚಿನ ತನಿಖೆಯಿಂದ ದೃಢೀಕರಿಸಲ್ಪಟ್ಟಿದೆ, ಯುದ್ಧದ ವೇಳೆ ಬನೂ ಖುರೈಝ್ ಗೋತ್ರದವರು ಸತ್ಯನಿಷೇಧಿಗಳ ಸೇನೆಯೊಂದಿಗೆ ಸೇರಿಕೊಂಡರು. ಮದೀನದ ಮೇಲೆ ದಿಢೀರನೆ ದಾಳಿ ನಡೆಸಲು ಅವರು ನಿರ್ಧರಿಸಿದ್ದರು. ಆದ್ದರಿಂದ ಬನೂ ಖುರೈಝ್ ಗೋತ್ರವಿದ್ದ ಭಾಗದ ಸಂರಕ್ಷಣೆ ಅಗತ್ಯವೆಂದು ಹಝ್ರತ್ ಪೈಗಂಬರ್(ಸ) ಮನವರಿಕೆ ಮಾಡಿದರು. ಹೀಗೆ ಇತಹಾಸದಿಂದ ತಿಳಿದುಬರುವುದೇನೆಂದರೆ ಬನೂ ಖುರೈಝಾ ಅವರ ವಿಶ್ವಾಸಘಾತವು ತಿಳಿದನಂತರ ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಎರಡು ಸೇನೆಗಳನ್ನು ಮಹಿಳೆಯರ ಸಂರಕ್ಷಣೆಗಾಗಿ ಕಳುಹಿಸಿದರು. ಅವುಗಳಲ್ಲಿ ಒಂದು ಸೇನೆಯಲ್ಲಿ ಇನ್ನೂರು ಸಿಪಾಯಿಗಳನ್ನು ನೇಮಿಸಿ ಮಸ್‌ಲಮ ಇಬ್ನೆ ಅಸ್ಲಮ್(ರ) ಅವರ ನೇತೃತ್ವದಲ್ಲಿ ಕಳುಹಿಸಿದರು ಮತ್ತೊಂದು ಸೇನೆಯಲ್ಲಿ ಮುನ್ನೂರು ಸಿಪಾಯಿಗಳನ್ನು ಝೈದ್ ಬಿನ್ ಹಾರಿಸ(ರ) ಅವರ ನೇತೃತ್ವದಲ್ಲಿ ಇನ್ನೊಂದು ಕಡೆ ನೇಮಿಸಿ ಅಲ್ಲಿರುವ ಮಹಿಳೆಯರು ಸುರಕ್ಷಿತವಾಗಿದ್ದಾರೆ ಎಂದು ತಿಳಿಯಲು ಅವರಿಗೆ ಸಮಯ ಸಮಯಕ್ಕೆ 'ಅಲ್ಲಾಹು ಅಕ್ಬರ್, ಅಲ್ಲಾಹು ಅಕ್ಬರ್' ಎಂದು ಉಚ್ಚಧ್ವನಿಯಲ್ಲಿ ಘೋಷಿಸಲು ಆದೇಶಿಸಲಾಯಿತು. ಕಂಡಕ್ ಯುದ್ಧದಲ್ಲಿ ಏಳುನೂರು ಸೈನಿಕರನ್ನು ಏಕೆ ಉಲ್ಲೇಖಿಸಲಾಗಿದೆ ಎಂಬ ನಮ್ಮ ಸಮಸ್ಯೆಯನ್ನು ಈ ವರದಿಯು ಪರಿಹರಿಸುತ್ತದೆ ಏಕೆಂದರೆ ಹನ್ನೆರಡು ನೂರು ಸೈನಿಕರಲ್ಲಿ ಐನೂರು ಸೈನಿಕರು ಮಹಿಳೆಯರನ್ನು ರಕ್ಷಿಸಲು ಕಳುಹಿಸಿದಾಗ ಹನ್ನೆರಡು ನೂರು ಮಂದಿ ಮಾತ್ರ ಉಳಿದಿದ್ದರು, ಹೀಗೆ ಕಂದಕ ಯುದ್ಧದ ಸೈನಿಕರ ಸಂಖ್ಯೆಗೆ ಸಂಬಂಧಿಸಿದಂತೆ ಇತಿಹಾಸಗಳಲ್ಲಿ ಕಂಡುಬರುವ ತೀಕ್ಷ್ಣವಾದ ಭಿನ್ನಾಭಿಪ್ರಾಯವನ್ನು ಇತ್ಯರ್ಥಗೊಳಿಸಲಾಯಿತು."

(ದೀಬಾಚ ತಫ್ಸೀರ್ ಅಲ್-ಖುರ್‌ಆನ್, ಅನ್ವರುಲ್-ಉಲೂಮ್, ಸಂಪುಟ-20, ಪುಟಗಳು 269-271)

ಮದೀನಾಕ್ಕೆ ಸತ್ಯನಿಷೇಧಿಗಳ ಆಗಮನದ ವಿವರಗಳು ಮತ್ತು ನಂತರದ ಸಂದರ್ಭಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ: ಅಬೂಸುಫ್‌ಯಾನಿನ ಮುಂದಾಳುತ್ವದಲ್ಲಿ ಮಕ್ಕಾದ ಖುರೈಶರು ಹಾಗೂ ಇತರ ಗೋತ್ರಗಳ ಸೇನೆ ಮದೀನಕ್ಕೆ ತಲುಪಿ ಕಂದಕದ ಸುತ್ತ ಡೇರೆಗಳನ್ನು ಹಾಕಿದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅದರ ವಿವರಣೆಯಲ್ಲಿ ಹೇಳುತ್ತಾರೆ: ಈ ಉದ್ದದ ಕಂದಕವು ಸುಮಾರು ಇಪ್ಪತ್ತು ದಿನಗಳವರೆಗೆ ಹಗಲು ರಾತ್ರಿಯ ಶ್ರಮದಿಂದ ಅಥವಾ ಒಂದು ವರದಿಯ ಪ್ರಕಾರ ಆರು ಹಗಲು ರಾತ್ರಿಗಳ ನಿರಂತರ ಶ್ರಮದಿಂದ ಪೂರ್ಣಗೊಂಡಿತು. ಮತ್ತು ಈ ಅಸಾಮಾನ್ಯ ಕಠಿಣ ಕೆಲಸವು ಸಹಾಬರನ್ನು ಸಂಪೂರ್ಣವಾಗಿ ದಣಿಸಿತು. ಆದರೆ ಇಲ್ಲಿ ಈ ಕೆಲಸವು ಕೊನೆಗೊಂಡಿತು ಮತ್ತು ಅಲ್ಲಿ ಯಹೂದಿಗಳು ಮತ್ತು ಅರಬ್ಬರ ಸತ್ಯನಿಷೇಧಿಗಳ ಸೈನ್ಯವು ತನ್ನ ಸಂಖ್ಯೆ ಮತ್ತು ಶಕ್ತಿಯಿಂದ ತುಂಬಿ ಮದೀನಾದಲ್ಲಿ ಕಾಣಿಸಿಕೊಂಡಿತು. ಅಬುಸುಫ್ಯಾನ್ ಮೊದಲು ಉಹುದ್ ಪರ್ವತದ ಕಡೆಗೆ ತಿರುಗಿದನು, ಆದರೆ ಆ ಸ್ಥಳವು ನಿರ್ಜನವಾದ ಸ್ಥಳವನ್ನು ಕಂಡು, ಮದೀನಾ ಪಟ್ಟಣದ ಮೇಲೆ ದಾಳಿ ಮಾಡಲು ಸೂಕ್ತವಾದ ಆ ಭಾಗಕ್ಕೆ ಹೋದನು, ಆದರೆ ಅದರ ಮುಂದೆ ಈಗ ಕಂದಕವನ್ನು ಅಗೆಯಲಾಗಿತ್ತು. ಸತ್ಯನಿಷೇಧಿಗಳ ಸೈನ್ಯವು ಈ ಸ್ಥಳಕ್ಕೆ ತಲುಪಿದಾಗ, ಎಲ್ಲಾ ಜನರು ತಮ್ಮ ದಾರಿಯಲ್ಲಿ ಕಂದಕವನ್ನು ಕಂಡು ಆಶ್ಚರ್ಯಚಕಿತರಾದರು ಮತ್ತು ಕಂದಕಕ್ಕೆ ಅಡ್ಡಲಾಗಿ ತೆರೆದ ಮೈದಾನದಲ್ಲಿ ಡೇರೆ ಹೂಡಲು ಒತ್ತಾಯಿಸಲಾಯಿತು. ಮತ್ತೊಂದೆಡೆ, ಸತ್ಯಮಿಷೇಧಿಗಳ ಸೈನ್ಯದ ಆಗಮನದ ಸುದ್ದಿಯನ್ನು ಕೇಳಿದ ನಂತರ, ಹಝ್ರತ್ ಪೈಗಂಬರ್(ಸ)ರು ಮೂರು ಸಾವಿರ ಮುಸ್ಲಿಮರೊಂದಿಗೆ ನಗರವನ್ನು ತೊರೆದು ಕಂದಕವನ್ನು ತಲುಪಿ ನಗರ ಮತ್ತು ಕಂದಕದ ನಡುವೆ 'ಸಲ್‌ಅ' ಪರ್ವತವನ್ನು ತಮ್ಮ ಹಿಂಬದಿಯಲ್ಲಿರಿಸಿ ಬೀಡುಬಿಟ್ಟರು. ಮತ್ತು ಕಂದಕವು ತುಂಬಾ ವಿಶಾಲವಾಗಿರಲಿಲ್ಲ ಮತ್ತು ಕೆಲವು ಭಾಗಗಳು ನಿಸ್ಸಂದೇಹವಾಗಿ ಬಲವಾದ ಮತ್ತು ಬುದ್ಧಿವಂತ ಸವಾರರು ಅದರ ಮೇಲಿನಿಂದ ಹಾರಿ ನಗರದ ಕಡೆಗೆ ಬರಬಹುದಾಗಿತ್ತು. ಮತ್ತು ಮದೀನಾದ ಸುತ್ತಮುತ್ತಲು ಎಲ್ಲಿ ಕಂದಕಗಳಿರಲಿಲ್ಲವೊ ಮತ್ತು ಕೇವಲ ಮನೆಗಳು ಮತ್ತು ಉದ್ಯಾನಗಳು ಮತ್ತು ಯಾದೃಚ್ಛಿಕ ಬಂಡೆಗಳನ್ನು ಮಾತ್ರ ರಕ್ಷಣೆಗೆ ಇತ್ತು, ಅವುಗಳನ್ನು ರಕ್ಷಿಸುವುದು ಸಹ ಅಗತ್ಯವಾಗಿತ್ತು. ಇದರಿಂದ ಶತ್ರುಗಳು ಈ ಕಡೆಯಿಂದ ಮನೆಗಳನ್ನು ಹಾನಿಗೊಳಿಸುವುದರ ಮೂಲಕ ಅಥವಾ ಇನ್ನಾವುದೇ ತಂತ್ರದಿಂದ ನಗರದ ಮೇಲೆ ದಾಳಿ ಮಾಡುತ್ತಾರೆ. ಆದ್ದರಿಂದ, ಹಝ್ರತ್ ಪೈಗಂಬರ್(ಸ)ರು ಸಹಾಬೀಯರನ್ನು ವಿವಿಧ ಗುಂಪುಗಳಾಗಿ ವಿಂಗಡಿಸಿದರು ಮತ್ತು ಕಂದಕದ ವಿವಿಧ ಭಾಗಗಳಲ್ಲಿ ಮತ್ತು ಮದೀನದ ಇತರ ಕಡೆಗಳಲ್ಲಿ ಸೂಕ್ತ ಸ್ಥಳಗಳಲ್ಲಿ ಕಾವಲು ಚೌಕಿಗಳನ್ನು ಸ್ಥಾಪಿಸಿದರು ಮತ್ತು ಈ ಚೌಕಿಗಳನ್ನು ಯಾವುದೇ ಸಮಯವಾಗಲಿ ಹಗಲು ಅಥವಾ ರಾತ್ರಿಯಲ್ಲಿ ಜಾಗರೂಕರಾಗಿರಬೇಕು ಅಸಡ್ಡೆ ಮಾಡಬಾರದು ಎಂದು ಸೂಚಿಸಲಾಯಿತು. ಮತ್ತೊಂದೆಡೆ, ಕಂದಕವನ್ನು ನಿರ್ಬಂಧಿಸುವ ಕಾರಣದದಿಂದ ತೆರೆದ ಮೈದಾನದಲ್ಲಿ ನಿಯಮಿತ ಯುದ್ಧ ಅಥವಾ ನಗರದ ಮೇಲೆ ಸಾಮಾನ್ಯ ದಾಳಿ ಅಸಾಧ್ಯವೆಂದು ಸತ್ಯನಿಷೇಧಿಗಳು ಕಂಡಾಗ, ಅವರು ಮುತ್ತಿಗೆಯ ಬಣ್ಣದಲ್ಲಿ ಮದೀನಾವನ್ನು ಸುತ್ತುವರೆದರು ಮತ್ತು ಕಂದಕದ ದುರ್ಬಲ ಭಾಗಗಳನ್ನು ಹುಡುಕಲು ಪ್ರಾರಂಭಿಸಿದರು.

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ 583-584)

ಆದಾಗ್ಯೂ, ಶತ್ರುಗಳು ಕಂದಕವನ್ನು ಪಾರು ಮಾಡುವುದರಲ್ಲಿ ವಿಫಲಗೊಂಡಾಗ ಬೇರೆ ತಂತ್ರಗಳನ್ನು ಮಾಡಲು ಯತ್ನಿಸಿದರು. ಅದರ ವಿವರಣೆಯಲ್ಲಿ ಇತಿಹಾಸದಲ್ಲಿ ಹೀಗೆ ಬರೆಯಲಾಗಿದೆ: ಸತ್ಯನಿಷೇಧಿಗಳು ಮದೀನಾವನ್ನು ಎಲ್ಲಾ ಕಡೆಗಳಿಂದ ಮುತ್ತಿಗೆ ಹಾಕಿದರು, ಆದರೆ ಅವರ ಎಲ್ಲಾ ಪ್ರಯತ್ನಗಳ ಹೊರತಾಗಿಯೂ, ಅವರು ಯಾವುದೇ ಸ್ಥಳದಿಂದ ಕಂದಕವನ್ನು ದಾಟಲು ಅಥವಾ ಮುಸ್ಲಿಮರ ಮೇಲೆ ಬಹಿರಂಗವಾಗಿ ಆಕ್ರಮಣ ಮಾಡಲು ಸಾಧ್ಯವಾಗಲಿಲ್ಲ. ಈ ಅಸಹಾಯಕತೆ ಮತ್ತು ಅಸಹಾಯುಕ ಸ್ಥಿತಿಯುನ್ನು ನೋಡಿದ ಅಬುಸುಫ್ಯಾನ್ ಮತ್ತು ಬನೂನಝೀರ್‌ನ ಮುಖ್ಯಸ್ಥ ಹುಯ್ಯಿ ಬಿನ್ ಅಖ್ತಬ್, ಮದೀನಾದಲ್ಲಿರುವ ಯಹೂದಿ ಗೋತ್ರವಾದ ಬನೂ ಖುರೈಝಾವನ್ನು ಹೇಗಾದರೂ ಅವರು ಮುಸಲ್ಮಾನರೊಂದಿಗೆ ಮಾಡೊಕೊಂಡಿರುವ ಒಪ್ಪಂದವನ್ನು ಮುರಿದು ತಮ್ಮೊಂದಿಗೆ ಸೇರಿಕೊಂಡು ಒಳಗಿನಿಂದ ಮದೀನಾದ ಜನರ ಮೇಲೆ ಹಲ್ಲೆ ಮಾಡಬೇಕೆಂದು ಮನವೊಲಿಸಲು ಯೋಜಿಸಿದನು. ಹೀಗೆ ಈ ಭಯಾನಕವಾದ ಕುತಂತ್ರ ನಡೆಯುವಂತಾಗಲು ಬನೂ ಖುರೈಝದ ಸರದಾರ ಕಅಬ್ ಬಿನ್ ಅಸದ್‌ನ ಬಳಿಗೆ ಹುಯ್ಯ್ ಬಿನ್ ಅಖ್ತಬ್ ಹೋದನು. ಕಅಬ್ ಅವರ ಬರುವಿಕೆಯ ಸುದ್ದಿ ಕೇಳಿ ಕೋಟೆಯ ಹೆಬ್ಬಾಗಿಲನ್ನು ಮುಚ್ಚಿದನು. ಹುಯ್ಯ್ ಒಳಗೆ ಪ್ರವೇಶಿಸಲು ಅನುಮತಿ ಕೇಳಿದಾಗ, ಕಅಬ್ ಬಾಗಿಲು ತೆರೆಯಲು ನಿರಾಕರಿಸಿದನು. ಹುಯ್ಯ್ ತನ್ನ ಧ್ವನಿಯನ್ನು ಹೆಚ್ಚಿಸಿ, "ಎಲೈ ಕಅಬ್! ನಿನ್ನ ವಿನಾಶವಾಗಲಿ ಬಾಗಿಲನ್ನು ತೆರೆಯಿರಿ ಎಂದು ಹೇಳಿದನು, ಅದಕ್ಕೆ ಕಅಬ್ ಹೇಳಿದನು, ಎಲೈ ಹುಯ್ಯ್! ನೀನು ದುಷ್ಟ ಮನುಷ್ಯನಾಗಿರುವೆ. ನಾನು ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್‌ರ ಜೊತೆ ಒಪ್ಪಂದ ಮಾಡಿಕೊಂಡಿದ್ದೇನೆ. ನಾನು ಈ ವಾಗ್ದಾನವನ್ನು ಮುರಿಯುವುದಿಲ್ಲ ಮತ್ತು ನಾನು ಯಾವಾಗಲೂ ಮುಹಮ್ಮದ್(ಸ) ಅವರನ್ನು ತಮ್ಮ ವಾಗ್ದಾನಗಳಲ್ಲಿ ಸತ್ಯಾವಂತ ಮತ್ತು ನಿಷ್ಠಾವಂತ ಎಂದು ಪಡೆದಿಕೊಂಡಿದ್ದೇನೆ. ಒಂದೆಡೆ ಹೀಗೆ ಹೇಳಿಕೆ ನೀಡಿದನು ಇನ್ನೊಂದೆಡೆ ತನ್ನ ಹೇಳಿಕೆಯನ್ನು ಬದಲಾಯಿಸಿಕೊಂಡನು. ಮತ್ತೆ ಅವನು: ಬಾಗಿಲನ್ನು ತೆರೆ ನಾನು ನಿನ್ನೊಂದಿಗೆ ಮಾತನಾಡಬೇಕು ಎಂದು ಹೇಳಿದನು. ನಾನು ನಿನ್ನೊಂದಿಗೆ ಮಾತನಾಡಲು ಒಂದು ವಿಷಯವಿದೆ ಎಂದನು. ಅದಕ್ಕೆ ಕಅಬ್ ಹೇಳಿದನು, ಅಲ್ಲಾಹನ ಆಣೆ! ನಾನು ಹಾಗೆ ಮಾಡುವುದಿಲ್ಲ. ಆದರೆ ಕೆಲವು ಪುನರಾವರ್ತನೆಯ ನಂತರ ಅಂತಿಮವಾಗಿ ಕಅಬ್ ಬಾಗಿಲು

ತೆರೆದನು ಆಗ ಹುಯ್ಯ್ ಹೇಳಿದನು: ಎಲೈ ಕಅಬ್! ನೀನು ನಾಶವಾಗಲಿ, ನಾನು ನಿನಗೆ ಸಮಯದ ಗೌರವವನ್ನು ಮತ್ತು ಘರ್ಜಿಸುವ ಸಮುದ್ರವನ್ನು ತಂದಿದ್ದೇನೆ. ನಾನು ಖುರೇಷಿಗಳ ನಾಯಕರು ಮತ್ತು ಮುಖ್ಯಸ್ಥರನ್ನು ನಿಮ್ಮ ಬಳಿಗೆ ತಂದಿದ್ದೇನೆ ಮತ್ತು ಅವರು ತಮ್ಮ ಸೈನ್ಯದೊಂದಿಗೆ ಮದೀನದ ಸುತ್ತಮುತ್ತಲಿನ ಮುಸ್ಲಿಮರನ್ನು ಮುತ್ತಿಗೆ ಹಾಕುತ್ತಿರುವ ಎಲ್ಲಾ ಗೋತ್ರಗಳ ವಿವರಗಳನ್ನು ನೀಡಿದನು ಮತ್ತು ಈಗ ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಗಳನ್ನು ನಾಶ ಮಾಡದೆ ಇಲ್ಲಿಂದ ಹಿಂದಿರುಗುವುದಿಲ್ಲ ಎಂದು ನಾವು ನಮ್ಮ ನಡುವೆ ಗಂಭೀರವಾದ ಒಪ್ಪಂದವನ್ನು ಮಾಡಿಕೊಂಡಿದ್ದೇವೆ ಎಂದು ಹೇಳಿದನು. ಮತ್ತು ಈ ಕಂದಕವು ನಮ್ಮ ದಾರಿಯಲ್ಲಿಲ್ಲದಿದ್ದರೆ ನಾವು ಯಶಸ್ವಿಯಾಗುತ್ತಿದ್ದೆವು. ಆದರೆ ಈ ಎಲ್ಲಾ ವಿಷಯಗಳನ್ನು ಕೇಳಿದ ನಂತರವೂ, ಬನೂಖುರೈಝಾ ಅವರ ನಾಯಕನು ಒಪ್ಪಂದವನ್ನು ಮುರಿಯಲು ಸಿದ್ಧರಿರಲಿಲ್ಲ ಮತ್ತು ಅವರು ಹೇಳಿದರು: ಅಲ್ಲಾಹನ ಆಣೆ! ನೀನು ನನ್ನ ಬಳಿ ಕಾಲದ ಅವಮಾನವನ್ನೂ ಮತ್ತು ನೀರಿಲ್ಲದ ಮೋಡವನ್ನೂ ತಂದಿದ್ದೀಯ. ಅದು ಕೇವಲ ಗುಡುಗು ಮತ್ತು ಮಿಂಚನ್ನು ಮಾತ್ರ ತೋರಿಸುತ್ತದೆ, ಅದರಲ್ಲಿ ಏನೂ ಇಲ್ಲ.

ಎಲೈ ಹುಯ್ಯ್! ನೀನು ನಶಿಸಿಹೋಗಲಿ. ನನ್ನನ್ನು ನನ್ನ ಸ್ಥಿತಿಯಲ್ಲಿ ಬಿಟ್ಟುಬಿಡು ಏಕೆಂದರೆ ನಾನು ಯಾವಾಗಲೂ ಮುಹಮ್ಮದ್(ಸ) ತನ್ನ ಮಾತಿನಲ್ಲಿ ಸತ್ಯವಂತರು ಹಾಗೂ ತನ್ನ ವಾಗ್ದಾನಗಳಲ್ಲಿ ನಿಷ್ಠಾವಂತರಾಗಿರುವುದನ್ನು ಕಂಡುಕೊಂಡಿದ್ದೇನೆ. ಹಝ್ರತ್ ಪೈಗಂಬರ್(ಸ)ರು ಸತ್ಯವಂತರು ಮತ್ತು ಅವರು ವಾಗ್ದಾನಗಳನ್ನು ಈಡೇರಿಸುತ್ತಾರೆ ಎಂದು ಅವನು ಪದೇ ಪದೇ ಹೇಳುತ್ತಿದ್ದನು. ಅವರು ನಮ್ಮನ್ನು ಎಂದಿಗೂ ಒತ್ತಾಯಿಸುವುದಿಲ್ಲ ಅಥವಾ ನಮ್ಮ ಧರ್ಮದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಅವರು ನಮ್ಮ ಉತ್ತಮ ನೆರೆಯಾಗಿದ್ದಾರೆ. ಆದ್ದರಿಂದ ನೀನು ಹಿಂದಿರುಗು. ನಮಗೂ ಮೊದಲು ನಿಮಗೆ ಆದ ಗತಿಯೇ ನಮಗೂ ಬರದಿರಲಿ.

ಆದರೆ ಹುಯ್ಯ್, ಕಅಬ್‌ನನ್ನು ಮನವೊಲೈಸುತ್ತಲೇ ಇದ್ದನು, ಕೊನೆಗೆ ಅವನು ಕಅಬ್‌ನ ಮನಸ್ಸನ್ನು ಮೃದುಗೊಳಿಸುವಲ್ಲಿ ಯಶಸ್ವಿಯಾದನು ಮತ್ತು ಅಂತಿಮವಾಗಿ ಕಅಬ್ ಕೂಡ ಅವನ ಮಾತಿಗೆ ಬಂದನು ಆದರೆ ಖುರೈಶ್ ಮತ್ತು ಘತ್‌ಫಾನ್ ಹಿಂತಿರುಗಿ ಮುಹಮ್ಮದ್(ಸ) ಅವರನ್ನು ವಧಿಸಲು ಸಾಧ್ಯವಾಗದಿದ್ದರೆ, ಆಗ ನಮಗೆ ಏನಾಗುತ್ತದೆ? ಈ ಬಗ್ಗೆ ಹುಯ್ಯ್ ನೀವು ಚಿಂತಿಸಬೇಡಿ. ಅಂತಹ ಸಂದರ್ಭದಲ್ಲಿ ನಾನು ನಿಮ್ಮೊಂದಿಗೆ ನಿಮ್ಮ ಕೋಟೆಯನ್ನು ಪ್ರವೇಶಿಸುತ್ತೇನೆ ಮತ್ತು ನಿಮಗೆ ಆಗುವ ತೊಂದರೆ ನನಗೂ ಬರುತ್ತದೆ ಎಂದು ಹೇಳಿದನು.

ಇಷ್ಟೆಲ್ಲಾ ಸಂಧಾನದ ನಂತರ ಕಅಬ್ ಬಿನ್ ಅಸದ್ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಮಾಡಿಕೊಂಡಿದ್ದ ಒಪ್ಪಂದವನ್ನು ಕೊನೆಗೂ ಮುರಿದನು. ಈ ಸಂದರ್ಭದಲ್ಲಿ, ಕಅಬ್‌ನ ಸಹಚರ ಅಮ್ರ್ ಬಿನ್ ಸಅದಿ ಅವನಿಗೆ ಬೋಧನೆ ಮತ್ತು ಸಲಹೆಗಳನ್ನು ನೀಡಿದರು ಮತ್ತು ಅವನ ಕೆಟ್ಟ ಕಾರ್ಯಗಳ ಬಗ್ಗೆ ಎಚ್ಚರಿಕೆ ನೀಡಿದರು ಮತ್ತು ಹಝ್ರತ್ ಪೈಗಂಬರ್(ಸ)ರ ದೃಢ ಸಂಕಲ್ಪವನ್ನು ನೆನಪಿಸಿದರು ಮತ್ತು ಅವರಿಗೆ ಹೇಳಿದರು: ನೀವು ಹಝ್ರತ್ ಪೈಗಂಬರ್(ಸ) ಅವರಿಗೆ ಸಹಾಯ ಮಾಡದಿದ್ದರೆ, ಅವರನ್ನು ಮತ್ತು ಅವರ ಶತ್ರುಗಳನ್ನು ಬಿಟ್ಟುಬಿಡಿ, ಆದರೆ ಒಪ್ಪಂದವನ್ನು ಮುರಿಯುವ ಮೂಲಕ ಶತ್ರು ಆಕ್ರಮಣಕಾರರನ್ನು ಬೆಂಬಲಿಸಬೇಡಿ, ಆದರೆ ಆತನು ನಿರಾಕರಿಸಿದನು.

ಈ ಹಂತದಲ್ಲಿ ಬನೂ ಖುರೈಝದ ಯಹೂದಿಯರಲ್ಲಿ ಉತ್ತಮ ಸ್ವಭಾವಿಗಳಾದ ಕೆಲವು ಜನರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದರು ಮತ್ತು ಮುಸ್ಲಿಮರಾದರು.

ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಅವರಿಗೆ ಬನೂ ಖುರೈಝಾ ಅವರ ಒಪ್ಪಂದವನ್ನು ಮುರಿಯುವ ಸುದ್ದಿಯನ್ನು ಪಡೆದರು, ಆದ್ದರಿಂದ ಅವರು ಅದನ್ನು ಹಝ್ರತ್ ಪೈಗಂಬರ್(ಸ) ಅವರಿಗೆ ವರದಿ ಮಾಡಿದರು, ಆದ್ದರಿಂದ ಅವರು(ಸ) ಸಅದ್ ಬಿನ್ ಮುಆಝ್(ರ) ಮತ್ತು ಸಅದ್ ಬಿನ್ ಉಬಾದಾ(ರ) ಅವರನ್ನು ಕಳುಹಿಸಿದರು. ಇವರಿಬ್ಬರು ತಮ್ಮ ಖೌಮಿನ ಸರದಾರರಾಗಿದ್ದರು ಮತ್ತು ಅವರು ತಮ್ಮೊಂದಿಗೆ ಅಬ್ದುಲ್ಲಾ ಬಿನ್ ರವಾಹಾ(ರ) ಮತ್ತು ಖವಾತ್ ಬಿನ್ ಜುಬೈರ್(ರ) ಅವರನ್ನು ಕಳುಹಿಸಿದರು. ಒಂದು ವರದಿಯ ಪ್ರಕಾರ, ಅವರು ಉಸೈದ್ ಬಿನ್ ಹುದೈರ್(ರ) ಅವರನ್ನೂ ತಮ್ಮೊಂದಿಗೆ ಕಳುಹಿಸಿದರು ಮತ್ತು ಈ ಖೌಮಿನ ಬಗ್ಗೆ ನಮಗೆ ಬಂದಿರುವ ಸುದ್ದಿ ನಿಜವೋ ಸುಳ್ಳೋ ಎಂದು ನೀವು ಹೋಗಿ ನೋಡಬೇಕು ಎಂದು ಹೇಳಿದರು. ಈ ಸುದ್ದಿ ನಿಜವೇ ಆಗಿದ್ದರೆ ಅದನ್ನು ಎಲ್ಲರ ಮುಂದೆ ಹೇಳಬೇಡಿ, ಆದರೆ ಈ ಸುದ್ದಿ ನಿಜವೆಂದು ನನಗೆ ತಿಳಿಯುವಂತೆ ಚಿಹ್ನೆಯನ್ನು ನೀಡಿ. ಅವರು ಆ ಒಂಪ್ಪಂದದಲ್ಲಿಯೇ ನೆಲೆನಿಂತಿದ್ದರೆ ಮತ್ತು ಈ ಸುದ್ದಿ ಸುಳ್ಳಾಗಿದ್ದರೆ ನೀವು ಈ ವಿಷಯವನ್ನು ಬಹಿರಂಗವಾಗಿ ಎಲ್ಲರ ಮುಂದೆ ಹೇಳಿ. ಆದ್ದರಿಂದ ಈ ನಿಯೋಗವು ಬನೂ ಖುರೈಝಾ ಅವರ ಬಳಿಗೆ ಹೋಯಿತು. ಅಲ್ಲಿ ಕಅಬ್ ಮತ್ತು ಅವನ ಸಂಗಡಿಗರನ್ನು ಮಾತನಾಡಿಸಿದಾಗ ಅವರ ಅಭಿಪ್ರಾಯಗಳು ಬದಲಾಗಿದ್ದವು. ಕಅಬ್‌ನನ್ನು ನೀನು ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರೊಂದಿಗೆ ಒಪ್ಪಂದ ಮಾಡಿಕೊಂಡಿರುವೆ ಎಂದು ಹೇಳಿದಾಗ ಅವನು ಬಹಳ ತಿರಸ್ಕಾರದಿಂದ 'ಯಾವ ರಸೂಲ್?' ನಮ್ಮೊಂದಿಗೆ ಯಾವುದೇ ಒಪ್ಪಂದವಿಲ್ಲ ಎಂದು ಹೇಳಿದನು. ನಾನು ಪಾದರಕ್ಷಕದ ಲೇಸ್‌ನಂತೆ ಒಪ್ಪಂದವನ್ನು ಮುರಿದಿರುವೆನು ಎಂದು ಹೇಳಿದನು. ವರದಿಗಳ ಪ್ರಕಾರ, ಈ ಸಂದರ್ಭದಲ್ಲಿ, ಇಬ್ಬರು ಪಕ್ಷಗಳ ನಡುವೆ ಕಟುವಾದ ಭಾಷಣ ನಡೆಯಿತು. ಆದಾಗ್ಯೂ, ಈ ನಿಯೋಗವು ಹಿಂತಿರುಗಿ ಬಂದು, ಸನ್ನೆಗಳೊಂದಿಗೆ ಮಾತನಾಡುತ್ತಾ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರಿಗೆ ವರದಿ ನೀಡಿತು. ಬಲಗುಂದಿಸುವಂತಹ ಮತ್ತು ಮೂರ್ಛೆ ಹೋಗಿಸುವಂತಹ ಆ ಕ್ಷಣದಲ್ಲಿ ಹಝ್ರತ್ ಪೈಗಂಬರ್(ಸ) ಸ್ವಲ್ಪ ಸಮಯ ಮೌನವಾದರು. ಈ ವಾರ್ತೆಯು ಯಾವುದೇ ಪ್ರಭಾವ ಅವರಲ್ಲಿ ಉಂಟಾಗಲಿಲ್ಲ. ಇಂತಹ ವಾರ್ತೆಯಿಂದ ಸಾಧಾರಣ ಮನುಷ್ಯನ ಬಲಗುಂದಿ ಹೋಗುತ್ತಿತ್ತು. ಸ್ವಲ್ಪ ಸಮಯದ ಮೌನದ ನಂತರ ಹಝ್ರತ್ ಪೈಗಂಬರ್(ಸ) ಹೇಳಿದರು:

**ಅಬ್‌ಶಿರು ಯಾ ಮಾಶರಲ್‌ಮುಮಿನೀನ ಬಿನಸ್ರಿಲ್ಲಾಹಿ ತಆಲ ವ ಅವ್‌ನಿಹೀ–**

ಎಲೈ ಸತ್ಯವಿಶ್ವಾಸಿಗಳ ಸಂಘವೇ, ಅಲ್ಲಾಹನ ಸಹಾಯ ಮತ್ತು ನೆರವಿನ ಜೊತೆಗೆ ಸಂತೋಷದಿಂದಿರಿ.

ನಂತರ ಅವರು ಹೇಳಿದರು: ನನಗೆ ದೃಢವಿಶ್ವಾಸವಿದೆ. ಒಂದು ಕಾಲ ಬರುವುದು. ಆಗ ನಾನು ಕಅ್‌ಬ ಭವನದ ಪರಿಕ್ರಮಣ ಮಾಡುವೆನು ಮತ್ತು ಅದರ ಕೀಲಿಗೈಗಳು ನನ್ನ ಕೈಗಳಲ್ಲಿ ಇರುವುವು ಹಾಗೂ ಇರಾನ್ ಮತ್ತು ರೋಮ್ ಸಾಮ್ರಾಜ್ಯಗಳು ಖಂಡಿತವಾಗಿಯೂ ನಾಶವಾಗುವುವು. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ–4, ಪುಟ–373–374, ದಾರುಲ್ ಕುತುಬ್ ಇಲ್ಮಿಯ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಬನೂಖುರೈಝಾರ ದ್ರೋಹದ ಬಗ್ಗೆ ವಿವರಿಸಿದ್ದಾರೆ. ಅವರು ಹೇಳುತ್ತಾರೆ: "ಅಬುಸುಫ್ಯಾನ್ ಬನೂ ನಝೀರ್ ಗೋತ್ರದ ಯಹೂದಿ ಮುಖ್ಯಸ್ಥ ಹುಯ್ಯ್ ಬಿನ್ ಅಖ್ತಬ್‌ಗೆ ರಾತ್ರಿಯ ಸಮಯದಲ್ಲಿ ಬನೂಖುರೈಝಾರ ಕೋಟೆಗೆ ಹೋಗಿ ಅವರ ಮುಖ್ಯಸ್ಥ ಕಅ್‌ಬ್ ಬಿನ್ ಅಸದ್ ಅವನಿಗೆ ಭೇಟಿ ನೀಡಿ ಬನೂಖುರೈಝಾ ಅವರಿಗೆ ತಮ್ಮೊಂದಿಗೆ ಸೇರಿಸಲು ಪ್ರಯತ್ನಿಸಲು ಸೂಚಿಸುವ ಮೂಲಕ ಒಂದು ಕುತಂತ್ರವನ್ನು ಮಾಡಿದನು. ಆದ್ದರಿಂದ ಹುಯ್ಯಿ ಬಿನ್ ಅಖ್ತಬ್ ಕಅಬ್‌ನ ಮನೆಗೆ ತಲುಪಿದನು. ಮೊದಲಿಗೆ, ಕಅಬ್ ಅವನ ಮಾತನ್ನು ಕೇಳಲು ನಿರಾಕರಿಸುತ್ತಾ ಹೀಗೆ ಹೇಳಿದನು: ಮುಹಮ್ಮದ್(ಸ) ಅವರೊಂದಿಗೆ ನಮ್ಮ ಒಪ್ಪಂದವಿದೆ ಮತ್ತು ಮುಹಮ್ಮದ್(ಸ)ರು ಯಾವಾಗಲೂ ತಮ್ಮ ಒಪ್ಪಂದಗಳನ್ನು ನಿಷ್ಠೆಯಿಂದ ಈಡೇರಿಸಿದ್ದಾರೆ ಆದ್ದರಿಂದ ನಾನು ಅವರಿಗೆ ದ್ರೋಹ ಮಾಡಲಾರೆ. ಆದರೆ ಹುಯ್ಯ್ ಅವನಿಗೆ ಅಂತಹ ಹಸಿರು ತೋಟಗಳನ್ನು ತೋರಿಸಿದನು ಮತ್ತು ಇಸ್ಲಾಂ ಧರ್ಮದ ಸನ್ನಿಹಿತ ವಿನಾಶದ ಬಗ್ಗೆ ಭರವಸೆ ನೀಡಿದನು ಮತ್ತು ನಾವು ಇಸ್ಲಾಮ್ ಧರ್ಮವನ್ನು ನಿರ್ಮೂಲನೆ ಮಾಡುವವರೆಗೂ ಅವರು ಮದೀನಾದಿಂದ ಹಿಂತಿರುಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರು, ಅಂತಿಮವಾಗಿ ಅವನೂ ಕೂಡ ಇದಕ್ಕೆ ಒಪ್ಪಿಕೊಂಡನು. ಈ ರೀತಿಯಾಗಿ, ಬನೂ ಖುರೈಝಾ ಅವರು ಇವರೊಂದಿಗೆ ಬಂದು ಸೇರಿಕೊಂಡರು. ಹಝ್ರತ್ ಪೈಗಂಬರ್(ಸ)ರಿಗೆ ಬನೂಖುರೈಝಾರ ಈ ಭಯಾನಕ ದ್ರೋಹದ ಬಗ್ಗೆ ತಿಳಿದಾಗ, ಅವರು ಝುಬೈರ್ ಬಿನ್ ಅಲ್–ಅವ್ವಾಮ್(ರ) ಅವರನ್ನು ಪರಿಸ್ಥಿತಿಯನ್ನು ಎರಡು ಅಥವಾ ಮೂರು ಬಾರಿ ತನಿಖೆ ಮಾಡಲು ಕಳುಹಿಸಿದರು. ತದನಂತರ ಅವರು ಸಅದ್ ಬಿನ್ ಮುಆದ್(ರ), ಸಅದ್ ಬಿನ್ ಉಬಾದಾ(ರ) ಮತ್ತು ಔಸ್ ಮತ್ತು ಖಝ್‌ರಜ್ ಗೋತ್ರದ ಮುಖ್ಯಸ್ಥ ಮತ್ತು ಇತರ ಕೆಲವು ಪ್ರಭಾವಶಾಲಿ ಸಹಾಬರನ್ನು ಬನೂ ಖುರೈಝಾ ಅವರ ಬಳಿಗೆ ನಿಯೋಗವಾಗಿ ಕಳುಹಿಸಿದರು ಮತ್ತು ಯಾವುದೇ ಆತಂಕಕಾರಿ ಸುದ್ದಿ ಇದ್ದರೆ ಅವರು ಹಿಂತಿರುಗಿ ಅದನ್ನು ಬಹಿರಂಗವಾಗಿ ವ್ಯಕ್ತಪಡಿಸದೆ ಜನರು ಚಿಂತಿಸಿದಂತೆ ಸಂಜ್ಞೆಯ ರೂಪದಲ್ಲಿ ತಿಳಿಸಬೇಕು ಎಂದು ಸೂಚಿಸಿದರು. ಈ ಜನರು ಬನೂಖುರೈಝಾರ ಮನೆಗೆ ತಲುಪಿ ಅವರ ಮುಖ್ಯಸ್ಥ ಕಅಬ್ ಬಿನ್ ಅಸದ್ ಅವನ ಬಳಿಗೆ ಹೋದಾಗ, ಆ ನತದೃಷ್ಟ ಕಅ್‌ಬ್ ಬಿನ್ ಅಸದ್ ಆ ಸಂಘದೊಂದಿಗೆ ಅತ್ಯಂತ ಅಹಂಕಾರದಿಂದ ಭೇಟಿಯಾದನು. ಇಬ್ಬರ ಸಅದರು ಒಪ್ಪಂದದ ಬಗ್ಗೆ ಪ್ರಸ್ತಾಪಿಸಿದಾಗ ಆತನು ಮತ್ತು ಆತನ ಗೋತ್ರದವರು ಹೀಗೆ ಹೇಳಿದರು: ಹೋಗು ನಮ್ಮ ಮತ್ತು ನಿಮ್ಮ ನಡುವೆ ಯಾವುದೇ ಒಪ್ಪಂದವಿಲ್ಲ. ಕಅ್‌ಬ್

ಬಿನ್ ಅಸದ್‌ನ ಉತ್ತರವನ್ನು ಆಲಿಸಿದ ನಂತರ ಆ ಸಂಘ ಮರಳಿ ಬಂದು ಹಝ್ರತ್ ಪೈಗಂಬರ್(ಸ)ರಿಗೆ ಬನೂ ಖುರೈಝ಼ ಗೋತ್ರ ಒಪ್ಪಂದವನ್ನು ಮುರಿದ ಬಗ್ಗೆ ಸೂಚ್ಯವಾಗಿ ತಿಳಿಸಿದರು.
(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-584-585)

ಕೆಲವೊಮ್ಮೆ ನಮ್ಮ ಯುವಕರು ಅನ್ಯರ ಮಾತನ್ನು ಆಲಿಸಿ ಆ ಸಮಯದಲ್ಲಿ ಬನೂಖುರೈಝಾ ಅವರ ಮೇಲೆ ಏಕೆ ಹಿಂಸಿಸಲಾಯಿತು? ಎಂದು ಪ್ರಶ್ನಿಸುತ್ತಾರೆ. ಅವರು ಒಪ್ಪಂದವನ್ನು ಮುರಿದಿದ್ದರು, ಆದ್ದರಿಂದ ಅವರಿಗೆ ಶಿಕ್ಷೆ ವಿಧಿಸಲಾಯಿತು. ಹಝ್ರತ್ ಪೈಗಂಬರ್(ಸ) ಅವರಿಗೆ ಯಾವುದೇ ಅನ್ಯಾಯ ಮಾಡಲಿಲ್ಲ. ಆದಾಗ್ಯೂ, ಇದರ ಬಗ್ಗೆ ಹೆಚ್ಚಿನ ವಿವರಗಳಿವೆ ಮತ್ತು ಹಝ್ರತ್ ಮುಸ್ಲೆಹ್ ಮೌಊದ್(ರ) ಕೂಡ ಇದನ್ನು ಬಹಳ ವಿವರವಾಗಿ ವಿವರಿಸಿದ್ದಾರೆ. ನಾನು ಅದನ್ನು ನಂತರ ವಿವರಿಸುತ್ತೇನೆ, ಇನ್‌ಶಾಅಲ್ಲಾಹ್.

ಇಂದಿನಿಂದ ಖುದ್ದಾಮುಲ್ ಅಹ್ಮದಿಯಾದ ಇಜ್ತಿಮಾ ಸಹ ಆರಂಭವಾಗುತ್ತಿದೆ. ಖುದ್ದಾಮ್ ಅದರಿಂದ ಸಂಪೂರ್ಣವಾದ ಪ್ರಯೋಜನವನ್ನು ಪಡೆಯಲು ಪ್ರಯತ್ನಿಸಬೇಕು. ಮಳೆ ಬರುವುದು ಎಂದು ಹವಾಮಾನ ಮುನ್ಸೂಚನೆ ಇದೆಯಾದರೂ ಅಲ್ಲಾಹನು ಕೃಪೆದೋರಲಿ ಮತ್ತು ಎಲ್ಲ ಕಾರ್ಯಕ್ರಮಗಳು ಸುಗಮವಾಗಿ ನಡೆಯಲಿ. ಖುದ್ದಾಮ್ ಈ ದಿನಗಳಲ್ಲಿ ಆಧ್ಯಾತ್ಮಿಕ ಮತ್ತು ಅರಿವಿನ ಮಟ್ಟವನ್ನು ವರ್ಧಿಸಲು ಪ್ರಯತ್ನಿಸಬೇಕು. ನಾನು ಗಮನ ಸೆಳೆದಿದ್ದ ಮತ್ತು ಮನವಿ ಮಾಡಿದ್ದ ಪ್ರಾರ್ಥನೆ ಮತ್ತು ದುರೂದಿನ ಕಡೆಗೆ ಈ ದಿನಗಳಲ್ಲಿ ವಿಶೇಷವಾದ ಗಮನ ನೀಡಿರಿ. ಸದಾ ಅವುಗಳನ್ನು ಪಠಿಸುತ್ತಿರಿ. ಸರ್ವಶಕ್ತನಾದ ಅಲ್ಲಾಹನು ಎಲ್ಲಾ ರೀತಿಯ ಪೈಶಾಚಿಕ ದಾಳಿಯಿಂದ ಪ್ರತಿಯೊಬ್ಬರನ್ನು ರಕ್ಷಿಸಲಿ.

ಕೆಲವು ಜನಾಝಾ ಗ್ಹಾಯಿಬ್‌ಗಳಿವೆ ಅದನ್ನು ಇಂದು ನಿರ್ವಹಿಸಲಾಗುವುದು. ನಾನು ಅವರನ್ನು ಉಲ್ಲೇಖಿಸುತ್ತೇನೆ. ಮದಲ ಉಲ್ಲೇಖ ಎಪ್ಪತ್ತಮೂರು (73) ವಯಸ್ಸಿನಲ್ಲಿ ಇತ್ತೀಚೆಗೆ ನಿಧನರಾದ ಮಾನ್ಯ ಹಬೀಬ್-ಉರ್-ರೆಹಮಾನ್ ಝ್ಯೂರ್ವಿ ಸಾಹಿಬ್ ರಬ್ವಾ ಅವರದ್ದಾಗಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿ ಆಗಿದ್ದರು ಮತ್ತು ವಾಖಿಫೆ ಝಿಂದಗಿ ಆಗಿದ್ದರು. ಅವರ ತಂದೆಯ ಹೆಸರು ಸೂಫಿ ಖುದಾ ಭಕ್ಷ್ ಝ್ಯೂರ್ವಿ ಎಂದಾಘಿತ್ತು. ಅವರ ಕುಟುಂಬದಲ್ಲಿ ಅಹ್ಮದಿಯತ್ ಅವರ ತಂದೆ ಸೂಫಿ ಖುದಾ ಬಕ್ಷ್ ಝ್ಯೂರ್ವಿ ಸಾಹಿಬ್ ಅವರಿಂದ ಬಂದಿತು, ಅವರು 1928 ರಲ್ಲಿ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಕೈಯಲ್ಲಿ ಬೈಅತ್ ಮಾಡಿದರು. ಮಾನ್ಯ ಹಬೀಬ್-ಉರ್-ರಹಮಾನ್ ಝ್ಯೂರ್ವಿ ಸಾಹಿಬ್ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ರಬ್ವಾದಲ್ಲಿ ಪಡೆದರು. ನಂತರ ಪಂಜಾಬ್ ವಿಶ್ವವಿದ್ಯಾಲಯದಿಂದ ಗ್ರಂಥಾಲಯ ವಿಜ್ಞಾನದಲ್ಲಿ ಎಂಎಸ್ಸಿ ಮಾಡಿದರು. 1981 ರಲ್ಲಿ, ಅವರು ತಮ್ಮ ಜೀವನವನ್ನು ವಖ್ಫ್ ಮಾಡಿದರು ಮತ್ತು ಅವರ ವಖ್ಫ್ ಅನ್ನು ಸ್ವೀಕರಿಸಲಾಯಿತು. ನಂತರ 1981ರಲ್ಲಿ ಸಹಾಯಕ ಗ್ರಂಥಪಾಲಕರಾಗಿ (Assistant librarian) ನೇಮಕಗೊಂಡರು. ಖಿಲಾಫತ್ ಗ್ರಂಥಾಲಯದ ಉಸ್ತುವಾರಿಯಾಗಿಯೂ (Incharge Library) ಮೂರ್ನಾಲ್ಕು ವರ್ಷ ಸೇವೆ ಸಲ್ಲಿಸಿದ್ದಾರೆ. ನಂತರ ಅವರನ್ನು ನಝಾರತ್ ಇಶಾಅತ್‌ನಲ್ಲಿ ನೇಮಿಸಲಾಯಿತು. ನಂತರ ಅವರು ತಾಹಿರ್ ಫೌಂಡೇಶನ್‌ನಲ್ಲಿ ನೇಮಕಗೊಂಡರು ಮತ್ತು ಆ ಸಮಯದಲ್ಲಿ ಅವರು ನಾಯಿಬ್ ನಾಝಿರ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಆಗಿ ಸೇವೆ ಸಲ್ಲಿಸುತ್ತಿದ್ದರು. ಖುದ್ದಾಮುಲ್ ಅಹ್ಮದಿಯಾದಲ್ಲಿ ಮುಹ್‌ತಮಿಮ್ ಆಗಿ ವಿವಿಧ ಸೇವೆಗಳನ್ನು ಮಾಡುವ ಅವಕಾಶವೂ ಅವರಿಗೆ ಲಭಿಸಿತು. ಅನ್ಸಾರುಲ್ಲಾದಲ್ಲಿ ಕೇಂದ್ರ ಖಾಯಿದ್ ಆಗಿ ಸೇವೆ ಸಲ್ಲಿಸುವ ಅವಕಾಶವೂ ಲಭಿಸಿತು. ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಅವರು ನಿರೂಪಿಸಿದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಜೀವನ ಚರಿತ್ರೆಯನ್ನು ವಿವಿಧ ಪುಸ್ತಕಗಳಿಂದ ಸಂಕಲಿಸಲು ಅವರು ಶ್ರಮಿಸಿದರು ಮತ್ತು **"ತಝ್‌ಕಿರ ಮಹದಿ"** ಎಂಬ ಹೆಸರಿನಲ್ಲಿ ಪ್ರಕಟವಾದ ಪುಸ್ತಕವನ್ನು ಸಂಗ್ರಹಿಸಿದರು. ಇದಲ್ಲದೆ, ಅವರು ಹಲವಾರು ಹಸ್ತಪ್ರತಿಗಳ ಮೇಲೆ ಕೆಲಸ ಮಾಡುತ್ತಿದ್ದರು, ಅವುಗಳಲ್ಲಿ ಕೆಲವು ವಿವಿಧ ಹಂತಗಳಲ್ಲಿವೆ. ಸರ್ವಶಕ್ತನಾದ ಅಲ್ಲಾಹನು ಅವರಿಗೆ ಒಬ್ಬ ಪುತ್ರ ಮತ್ತು ಇಬ್ಬರು ಪುತ್ರಿಯರನ್ನು ಅನುಗ್ರಹಿಸಿದನು. ಅವರು ಖಿಲಾಫತ್‌ನೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು ಮತ್ತು ಅವರು ತುಂಬಾ ಶಾಂತ ಸ್ವಭಾವದವರಾಗಿದ್ದರು ಮತ್ತು ಅವರು ತಮ್ಮ ಕೆಲಸದಲ್ಲಿ ತೊಡಗಿಸಿಕೊಂಡಿದ್ದರು. ಅವರಿಗೆ ಯಾವುದೇ ಸೇವೆಯನ್ನು ನಿಯೋಜಿಸಿದ್ದರೂ, ಅವರು ಅದನ್ನು ಉತ್ತಮವಾಗಿ ನಿರ್ವಹಿಸಿದರು. ಯಾವಾಗಲೂ ವಕ್ಫ್‌ನ ಹಕ್ಕನ್ನು ಪಾವತಿಸಿ ಉತ್ಸಾಹದಿಂದ ಕೆಲಸ ಮಾಡುತ್ತಿದ್ದರು. ಅವರು ತುಂಬಾ ಸ್ನೇಹಪರ, ಹರ್ಷಚಿತ್ತದಿಂದ ಕೂಡಿದ ವ್ಯಕ್ತಿತ್ವವನ್ನು ಹೊಂದಿದ್ದರು. ಅಲ್ಲಾಹನು ಅವರ ಮೇಲೆ ಕರುಣೆ ಮತ್ತು ಮಗ್‌ಫಿರತ್ ಅನ್ನು ನೀಡಲಿ. ಅವರ ಮಕ್ಕಳಿಗೂ ಅವರ ಸತ್ಕಾರ್ಯಗಳಲ್ಲಿ ನೆಲೆಗೊಳ್ಳಲು ತೌಫೀಖ್ ನೀಡಲಿ.

ಎರಡನೆಯ ಉಲ್ಲೇಖ ಡಾ. ಸೈಯದ್ ರಿಯಾಝುಲ್ ಹಸನ್ ಸಾಹಿಬ್ ಅವರದ್ದಾಗಿದೆ. ಅವರು ಕಳೆದ ಕೆಲವು ದಿನಗಳ ಮುಂಚೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಬ್ರಿಗೇಡಿಯರ್ ಡಾ. ಜಿಯಾವುಲ್ ಹಸನ್ ಸಾಹಿಬ್ ಅವರ ಪುತ್ರ ಆಗಿದ್ದರು. ಅವರು ತಮ್ಮ ಜೀವನವನ್ನು ವಖ್ಫ್ ಮಾಡಿದ್ದರು ಮತ್ತು ವೈದ್ಯರಾಗಿ ಸೇವೆ ಸಲ್ಲಿಸಿದರು. ಚಿಕ್ಕಂದಿನಿಂದಲೂ ಅವರು ಜಮಾಅತ್ತಿಗೆ ಸೇವೆ ಸಲ್ಲಿಸುತ್ತಿದ್ದರು. ಉಗಾಂಡಾ, ಕೀನ್ಯಾ, ಗ್ಯಾಂಬಿಯಾ ಮತ್ತು ಪಾಕಿಸ್ತಾನದಲ್ಲಿ ಇಪ್ಪತ್ತು ವರ್ಷಗಳಿಗೂ ಹೆಚ್ಚು ಕಾಲ ಮಜ್ಲಿಸ್ ನುಸ್ರತ್ ಜಹಾನ್ ಅಡಿಯಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ಅವರು ಪಡೆದರು. ಕೀನ್ಯಾದಲ್ಲಿ ಹಲವು ವರ್ಷಗಳ ಸೇವೆಯ ನಂತರ, ಅವರು ಸಾಮಾನ್ಯ ಶಸ್ತ್ರಚಿಕಿತ್ಸಕರಾಗಿ ವಿಶೇಷತೆ ಮತ್ತು ತರಬೇತಿಗಾಗಿ ಅನುಮತಿಯನ್ನು ಕೋರಿದರು ಮತ್ತು ಅಲ್ಲಿಂದ ಪಾಕಿಸ್ತಾನಕ್ಕೆ ತೆರಳಿದರು ಮತ್ತು ಹಲವಾರು ವೈದ್ಯಕೀಯ ಡಿಪ್ಲೋಮಾಗಳು ಮತ್ತು ಪ್ರಮಾಣಪತ್ರಗಳನ್ನು ಪಡೆದರು. ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ವೈದ್ಯರಿಗೆ ಅಂಗರಚನಾಶಾಸ್ತ್ರವನ್ನು (Anatomy) ಕಲಿಸುವ ಅವಕಾಶವೂ ಅವರಿಗೆ ಲಭಿಸಿತು. ಅವರು ಉತ್ತಮ ವೈದ್ಯರಾಗಿದ್ದರು. ಗ್ಯಾಂಬಿಯಾದಲ್ಲಿ ಸ್ಥಳೀಯ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡುತ್ತಿದ್ದರು. ಅವರ ಶಿಕ್ಷಣವನ್ನು ಪ್ರಾಯೋಜಿಸುತ್ತಿದ್ದರು. ಕೆಲಸ ಹುಡುಕುವುದರಲ್ಲಿ ಅವರಿಗೆ ಸಹಾಯ ಮಾಡುತ್ತಿದ್ದರು. ಬಡ ಮತ್ತು ಅಗತ್ಯವಿರುವ ಸ್ನೇಹಿತರಿಗೆ ಹಣಕಾಸಿನ ನೆರವು ನೀಡಲು ಯಾವಾಗಲೂ ಸಿದ್ಧರಾಗಿರುತ್ತಿದ್ದರು. ಅವರ ಒಂದು ದೊಡ್ಡ ಗುಣವೆಂದರೆ ಅವರು ಬಹಳ ಪ್ರಾರ್ಥನೆ ಮಾಡುವವರು ಮತ್ತು ತಹಜ್ಜುದ್ ನಮಾಝ್ ನಿರ್ವಹಿಸುವವರಾಗಿದ್ದರು. ಅವರಿಗೆ ಯೌವನದಿಂದಲೂ ತಹಜ್ಜುದ್ ನಮಾಝ್ ನಿರ್ವಹಿಸುವುದರಲ್ಲಿ ಆಸಕ್ತಿ ಇತ್ತು. ನಿಮ್ಮ ಪರಿಚಯಸ್ಥರು ಬರೆಯುತ್ತಾರೆ: ಅವರು ತುಂಬಾ ಸ್ನೇಹಪರವಾಗಿದ್ದರು, ರೋಗಿಗಳ ಬಗ್ಗೆ ನಿಜವಾದ ಸಹಾನುಭೂತಿ ಮತ್ತು ಪ್ರೀತಿ ಇತ್ತು. ಅವರು ಶ್ರಮಶೀಲ, ಉತ್ಸಾಹಿ, ನಂಬಿಗಸ್ತ ವ್ಯಕ್ತಿಯಾಗಿದ್ದರು. ಪ್ರಾರ್ಥಿಸುವವರು ಮತ್ತು ಜನರ ಮೇಲೆ ಸಹಾನುಭೂತಿ ತೋರುವ ವ್ಯಕ್ತಿತ್ವ ಹೊಂದಿದ್ದರು. ಅವರ ವ್ಯಕ್ತಿತ್ವವು ಸ್ವಾಭಿಮಾನ, ನಮ್ರತೆ ಮತ್ತು ಸೇವಾ ಮನೋಭಾವವಾಗಿತ್ತು. ಅವರು ತುಂಬಾ ಸಭ್ಯರಾಗಿದ್ದರು. ಅವರು ವಾಖಿಫೆ ಜಿಂದಗಿಯವರನ್ನು ತುಂಬಾ ಗೌರವಿಸುತ್ತಿದ್ದರು. ದಿವಂಗತರ ಮೇಲೆ ಅಲ್ಲಾಹನು ಕರುಣೆ ಮತ್ತು ಮಗ್‌ಫಿರತ್ ಅನ್ನು ನೀಡಲಿ.

ಮೂರನೆಯ ಉಲ್ಲೇಖವು ಗೌರವಾನ್ವಿತ ಪ್ರೊಫೆಸರ್ ಅಬ್ದುಲ್ ಜಲೀಲ್ ಸಾದಿಕ್ ಸಾಹಿಬ್ ರಬ್ವಾಹ್ ಅವರದ್ದಾಗಿದೆ. ಅವರು ಇತ್ತೀಚೆಗೆ ಎಂಬತ್ತನೇ ವಯಸ್ಸಿನಲ್ಲಿ (80) ನಿಧನರಾದರು. **ಇನ್ನ ಲಿಲ್ಲಾಹಿ ವ ಇನ್ನ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿ ಆಗಿದ್ದರು. ಖುರೈಷಿ ಅಬ್ದುಲ್ ಘನಿ ಸಾಹಿಬ್ ರಬ್ವಾಹ್ ಅವರ ಪುತ್ರ ಆಗಿದ್ದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ಅಜ್ಜ (ತಂದೆಯ ಕಡೆಯಿಂದ) ಗುಜರಾತ್ ಜಿಲ್ಲೆಯ ಗೋಲಿಕಿಯ ಹಝ್ರತ್ ಮಿಯಾಂ ಕುತುಬುದ್ದೀನ್ ಸಾಹಿಬ್ ಜಿಲ್ಲೆಯ ಅವರ ಅಜ್ಜ ಹಜರತ್ ಮಿಯಾನ್ ಕುತುಬುದ್ದೀನ್ ಸಾಹಿಬ್ ಮತ್ತು ಹಝ್ರತ್ ಮೌಲ್ವಿ ಮುಹಮ್ಮದ್ ಉಸ್ಮಾನ್ ಸಾಹಿಬ್ ಅಮೀರ್ ಜಮಾತ್ ದೇರಾ ಗಾಜಿ ಖಾನ್ ಮೂಲಕ ಬಂದಿತು. ಜಲೀಲ್ ಸಾದಿಕ್ ಸಾಹಿಬ್ ಅವರು ರಾಜ್ಯಶಾಸ್ತ್ರದಲ್ಲಿ ಎಂಎ ಮಾಡಿದರು. ನಂತರ 1964 ರಲ್ಲಿ ಶಿಕ್ಷಣ ಕಾಲೇಜಿನಲ್ಲಿ ಶಿಕ್ಷಕರಾಗಿ ನೇಮಕಗೊಂಡರು. ನಂತರ 1966 ರಲ್ಲಿ, ಅವರು ಇಂಗ್ಲಿಷ್‌ನಲ್ಲಿ ಲಿಟರೇಚರ್‌ನಲ್ಲಿ ಎಂಎ ಮಾಡಿದರು ಮತ್ತು ನಂತರ ಅವರು ಇಸ್ಲಾಮಿಕ್ ಕಾಲೇಜ್ ಆಫ್ ಎಜುಕೇಶನ್‌ನ ಇಂಗ್ಲಿಷ್ ವಿಭಾಗದಲ್ಲಿ ನಿಯಮಿತವಾಗಿ ನೇಮಕಗೊಂಡರು. ಅವರು ನಲವತ್ತೊಂಬತ್ತು ವರ್ಷಗಳ ಕಾಲ ನಿಯಮಿತ ಬೋಧನೆಯಲ್ಲಿ ಸೇವೆ ಸಲ್ಲಿಸಿದರು. ನಾನು ಕಾಲೇಜಿನಲ್ಲಿ ಅವರ ವಿದ್ಯಾರ್ಥಿಯಾಗಿದ್ದೆ, ಅವರು ತುಂಬಾ ಶಾಂತ ಸ್ವಭಾವ ಮತ್ತು ಪ್ರೀತಿಯ ಶಿಕ್ಷಕರಾಗಿದ್ದರು. ವಿದ್ಯಾರ್ಥಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು, ವಿದ್ಯಾರ್ಥಿಗಳನ್ನು ಗೌರವಿಸುತ್ತಿದ್ದರು. 2003 ರಲ್ಲಿ ಅವರ ನಿವೃತ್ತಿಯ ನಂತರ, ಅವರು ತಮ್ಮ ಜೀವನವನ್ನು ವಖ್ಫ್ ಮಾಡಿದರು ಮತ್ತು ಅವರು ಸದರ್ ಸದರ್ ಅಂಜುಮನ್ ಅಹ್ಮದಿಯಾದ ದಾಖಲೆಗಳ ವಿಭಾಗದ ಅಧ್ಯಕ್ಷರಾಗಿ ನೇಮಕಗೊಂಡರು. ನಯಿಬ್ ನಾಝಿರ್ ಆಗಿದ್ದರು. ಅವರು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದಲ್ಲಿ ಮುಹ್‌ತಮಿಮ್ ಆಗಿ ವಿವಿಧ ಸ್ಥಳಗಳಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಹೊಂದಿದ್ದರು. ಅವರು ಪಾಕಿಸ್ತಾನದ ಆರೋಗ್ಯ ಮಂಡಳಿಯ ಅಧ್ಯಕ್ಷರೂ ಆಗಿದ್ದರು. ನಂತರ, 1983 ರಿಂದ, ಅವರು ಪಾಕಿಸ್ತಾನದ ಕೇಂದ್ರ ನ್ಯಾಯಾಂಗದಲ್ಲಿ ನ್ಯಾಯಾಧೀಶರೂ

(ಖಾಝೀ) ಆಗಿದ್ದರು. ಅವರು ತಮ್ಮ ಬಡಾವಣೆಯ ಸದರ್ ಆಗಿ ಸೇವೆಸಲ್ಲಿಸುವ ಅವಕಾಶವೂ ಅವರಿಗೆ ಲಭಿಸಿತು. ಅವರಿಗೆ ಇಬ್ಬರು ಪುತ್ರಿಯರು ಮತ್ತು ಒಬ್ಬ ಪುತ್ರ ಇದ್ದಾರೆ. ಅವರ ಬಗ್ಗೆ ಬರೆಯುವವರು ಹೇಳುತ್ತಾರೆ ಮತ್ತು ಅವರು ಬಹಳ ಸರಿಯಾಗಿಯೇ ಹೇಳುತ್ತಾರೆ: ಅವರು ಬಹಳ ಉತ್ತಮ ಸ್ವಭಾವದವರಾಗಿದ್ದರು ಮತ್ತು ನೀವು ಆಗಾಗ್ಗೆ ಮೌನವಾಗಿರಲು ಆದ್ಯತೆ ನೀಡುತ್ತಿದ್ದರು, ಆದರೆ ನೀವು ಮಾತನಾಡುವಾಗ, ಯಾವಾಗಲೂ ಚಿಂತನಶೀಲರಾಗಿ, ಅಚ್ಚುಕಟ್ಟಾಗಿ ಮಾತನಾಡುತ್ತಿದ್ದರು. ಶುದ್ಧ ವ್ಯಕ್ತಿತ್ವ ಹೊಂದಿದ್ದರು. ಅನಾವಶ್ಯಕವಾಗಿ ಯಾರ ಕೆಲಸದಲ್ಲೂ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಅಗತ್ಯವಿರುವಲ್ಲಿ ಯಾವಾಗಲೂ ಉತ್ತಮ ಸಲಹೆ ನೀಡುತ್ತಿದ್ದರು. ಒಳ್ಳೆಯ ಕಾರ್ಯಗಳನ್ನು ಪ್ರೋತ್ಸಾಹಿಸುತ್ತಿದ್ದರು. ನಿಮಗೆ ಯಾರಿಂದಾದರು ನೋವು ಪಡೆಯುತ್ತೊದ್ದರೆ ಅವರು ದೂರುತ್ತಿರಲಿಲ್ಲ. ಅವರು ಮಹಾನ್ ಸಹನಶೀಲರು, ಕೃತಜ್ಞಸ್ವಭಾವದವರಾಗಿದ್ದರು. ಅವರು ಮೂಕ ಮತ್ತು ಗುಪ್ತ ಕೈಯಿಂದ ಅಗತ್ಯವಿರುವ ಸ್ನೇಹಿತರಿಗೆ ಹಣಕಾಸಿನ ನೆರವು ನೀಡುತ್ತಿದ್ದರು. ಅವರು ನಿಯಮಿತವಾಗಿ ಪತ್ರಗಳನ್ನು ಬರೆಯುತ್ತಿದ್ದರು. ಅವರ ಸ್ವಂತ ಮನೆಯ ಸಂಬಂಧಗಳು ಸಹ ಬಹಳ ಸಂತೋಷದಿಂದ ಕೂಡಿದ್ದವು. ಮನೆಯಲ್ಲಿ ಪತ್ನಿಯ ಮತ್ತು ತಂದೆ-ತಾಯಿಯರ ಸೇವೆ ಮಾಡುವವರು ಅವರ ಹಕ್ಕನ್ನು ಈಡೇರಿಸುವವರಾಗಿದ್ದರು. ಅವರ ಸಹೋದರರು ಬರೆಯುತ್ತಾರೆ: ಅವರು ತಮ್ಮ ಸಹೋದರ ಸಹೋದರಿಯರನ್ನು ಉತ್ತಮವಗಿ ನೋಡಿಕೊಳ್ಳುತ್ತಿದ್ದರು ಮತ್ತು ಅವರ ಸೇವೆಯನ್ನು ಮಹಾನ್ ಕರ್ತವ್ಯವೆಂದು ಮಾಡುತ್ತಿದ್ದರು.

ಮುಂದಿನ ಉಲ್ಲೇಖವು ಮಾಸ್ಟರ್ ಮುನೀರ್ ಅಹ್ಮದ್ ಸಾಹಿಬ್ ಜಾಂಗ್ ಅವರದ್ದಾಗಿದೆ. ಅವರು ಇತ್ತೀಚೆಗೆ ಎಂಬತ್ತೆರಡನೆಯ ವಯಸ್ಸಿನಲ್ಲಿ (82) ನಿಧನರಾದರು. **ಇನ್ನ ಲಿಲ್ಲಾಹಿ ವ ಇನ್ನ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿ ಆಗಿದ್ದರು. ಅವರ ತಂದೆ, ಮಿಯಾಂ ಗುಲಾಮ್ ಮುಹಮ್ಮದ್ ಸಾಹಿಬರು 1930 ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಅಲ್-ಸಾನಿ(ರ) ಅವರ ಬೈಅತ್ ಮಾಡಿದ್ದರು. ಮೇಷ್ಟ್ರು ಹುಟ್ಟಿನಿಂದ ಅಹ್ಮದಿಯಾಗಿದ್ದರು. ಖುದ್ದಾಮುಲ್ ಅಹ್ಮದಿಯಾ ಮತ್ತು ಅನ್ಸಾರುಲ್ಲಾಹ್‌ನಲ್ಲಿ ನಲವತ್ತು ವರ್ಷಗಳ ಕಾಲ ಸೇವೆ ಸಲ್ಲಿಸುವ ಅವಕಾಶ ಅವರಿಗೆ ಲಭಿಸಿತು. ಅವರು ಜಿಲ್ಲೆಯ ಖಾಯಿದ್ ಆಗಿದ್ದರು. ಮತ್ತು ಜಾಂಗ್ ಜಿಲ್ಲೆಯ ನಾಜಿಮ್ ಆಗಿದ್ದರು. ನಂತರ, ಚಿನಿಯೋಟ್ ಜಿಲ್ಲೆ ರಚನೆಯಾದಾಗ, ಅವರು ಅಲ್ಲಿಯೂ ನಾಝಿಮ್ ಆಗಿದ್ದರು. ಅವರು ಅತ್ಯಂತ ಪ್ರಾಮಾಣಿಕ ಮತ್ತು ನಿಷ್ಠಾವಂತ ಸೇವಕರಾಗಿದ್ದರು ಮತ್ತು ಒಳ್ಳೆಯ ಸ್ವಭಾವದ ಜೀವಿಯಾಗಿದ್ದರು. ಅವರು ಜಾಂಗ್‌ನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸ ಮಾಡಿದರು ಮತ್ತು ಅವರನ್ನು ಬಹಳವಾಗಿ ಗೌರವಿಸುವ ಸಾವಿರಾರು ವಿದ್ಯಾರ್ಥಿಗಳನ್ನು ಹೊಂದಿದ್ದಾರೆ. ಸರ್ಕಾರಿ ಕಛೇರಿಗಳಿಗೆ ಹೋಗಬೇಕೆಂದರೆ ಜನರಿಗಾಗಿ ಅದರಲ್ಲೂ ಅಹ್ಮದೀಯರಿಗೆ ಕೆಲಸ ಮಾಡುತ್ತಿದ್ದರು ಮತ್ತು ಅವರ ಕೆಲಸದಲ್ಲಿ ಅವರಿಗೆ ಸಹಾಯ ಮಾಡುವುದಲ್ಲದೆ ಅವರ ಮನೆಗಳಿಗೆ ಸ್ವಾಗತಿಸುತ್ತಿದ್ದರು. ಸಾರ್ವಜನಿಕ ಸಂಪರ್ಕದ ವ್ಯಾಪ್ತಿ ಬಹಳ ವಿಸ್ತಾರವಾಗಿತ್ತು ಮತ್ತು ಈ ಎಲ್ಲಾ ಸಂಬಂಧಗಳನ್ನು ಜಮಾಅತ್ ಮತ್ತು ಜಮಾಅತ್ ಸ್ನೇಹಿತರ ಸೇವೆಗಾಗಿ ಬಳಸಲಾಗುತ್ತಿತ್ತು, ವೈಯಕ್ತಿಕ ಲಾಭಕ್ಕಾಗಿ ಅಲ್ಲ. ಬಂಧಿತರು, ಅವರು ಜಮಾಅತ್ತಿನ ಬಂಧಿತರಾಗಿರಲಿ ಅಥವಾ ಜಮಾಅತೇತರ ಬಂಧಿತರಾಗಿರಲಿ, ಅವರ ಕಲ್ಯಾಣ ಮತ್ತು ಸೇವೆಗಾಗಿ ಬಳಸಲಾಗುತ್ತಿತ್ತು. ನೀವು ಜೈಲು ಅಧಿಕಾರಿಗಳೊಂದಿಗೆ ವೈಯಕ್ತಿಕ ಸಭೆಗಳನ್ನು ನಡೆಸಿದ್ದೀರಿ, ಅವರ ಮೂಲಕ ನೀವು ಜಮಾಅತ್ತಿನ ಕೈದಿಗಳ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಿದ್ದೀರಿ. ಜೈಲುಗಳಲ್ಲಿ ಸೌಲಭ್ಯಗಳನ್ನು ಒದಗಿಸುವಲ್ಲಿ ನೀವು ವ್ಯಾಪಕ ಸಂಪರ್ಕವನ್ನು ಹೊಂದಿದ್ದೀರಿ. ನಾವು, ನಾನು ಮತ್ತು ನನ್ನ ಸಹೋದ್ಯೋಗಿಗಳು ಜೈಲಿನಲ್ಲಿದ್ದಾಗ, ಈ ಅವಧಿಯಲ್ಲಿ ಅವರು ನಮಗೆ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಮತ್ತು ಜೈಲರ್‌ನೊಂದಿಗಿನ ವೈಯಕ್ತಿಕ ಸಂಬಂಧದಿಂದಾಗಿ, ಅವರು ಸಾಮಾನ್ಯ ಕೈದಿಗಳಿಗೆ ಒದಗಿಸದ ಕೆಲವು ಉತ್ತಮ ಸೌಲಭ್ಯಗಳನ್ನು ನಮಗೆ ಒದಗಿಸಿದ್ದರು ಮತ್ತು ಅಲ್ಲಾಹನ ಅನುಗ್ರಹದಿಂದ, ಅವರು ನಿರ್ದಿಷ್ಟ ವ್ಯಕ್ತಿಯ ಸೇವೆಯನ್ನು ಮಾಡಬೇಕಾಗಿಲ್ಲ. ಅವರು ಬಡ ಅಹ್ಮದಿಯಾಗಿರಲಿ ಅಥವಾ ಶ್ರೀಮಂತನಾಗಿರಲಿ, ಅವರು ಯಾವಾಗಲೂ ಎಲ್ಲರಿಗೂ ಸೇವೆ ಸಲ್ಲಿಸಲು ಸಿದ್ಧರಾಗಿದ್ದರು ಮತ್ತು ಸಾಮಾನ್ಯವಾಗಿ ಕೈದಿಗಳ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಿದ್ದರು. ಅವರು ಖಾದಿಯಾನ್‌ನನ್ನು ತುಂಬಾ ಪ್ರೀತಿಸುತ್ತಿದ್ದರು. ಬಹುತೇಕ ಪ್ರತಿ ವರ್ಷ ನೀವು ಖಾದಿಯಾನ್‌ಗೆ ಹೋಗಿ ಅಲ್ಲಿ ಡ್ಯುಟಿ ನೀಡುತ್ತಿದ್ದರು. ಕೇಂದ್ರ ಪ್ರತಿನಿಧಿಗಳು ತಮ್ಮ ಜಿಲ್ಲೆಗೆ ಭೇಟಿ ನೀಡಿದಾಗ ಅಲ್ಲಿಯೂ ಅವರಿಗೆ ಸಹಕಾರ ನೀಡುತ್ತಿದ್ದರು. 1988ರಲ್ಲಿ ಕರಪತ್ರಗಳನ್ನು ಹಂಚಿದ್ದಕ್ಕಾಗಿ ಅವರ ವಿರುದ್ಧ ಪ್ರಕರಣವೂ ದಾಖಲಾಗಿತ್ತು, ಆದರೆ ನಂತರ ಅದನ್ನು ವಜಾಗೊಳಿಸಲಾಯಿತು. ಅಲ್ಲಾಹನು ಕ್ಷಮೆ ಮತ್ತು ಮಗ್‌ಫಿರತ್‌ನ್ನು ನೀಡಲಿ. ಪದವಿಗಳನ್ನು ಹೆಚ್ಚಿಸಲಿ. ಅವರಿಗೆ ಮಕ್ಕಳಿರಲಿಲ್ಲ.

**(ಅಲ್-ಫಝ್ಲ್ ಇಂಟರ್‌ನ್ಯಾಶನಲ್, ಅಕ್ಟೋಬರ್ 11, 2024, ಪುಟ 2-6)**

-------------*****-------------

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಬಯಸಿದರೆ, ಅವನಿಗೆ ಕಾಫಿರ್ ಮತ್ತು ದಜ್ಜಾಲ್ ಎಂದು ಕರೆಯಲಾಗುತ್ತದೆ. ಈ ಜನರು ವಿಶ್ವಾಸದ ಫಲಿತಾಂಶವನ್ನು ನಂಬಲು ಸಾಧ್ಯವಾಗದಿದ್ದರೆ, ಕನಿಷ್ಠ ಅದನ್ನು ಊಹಿಸಿಕೊಳ್ಳಿ ಎಂದು ನಾನು ಹೇಳುತ್ತೇನೆ. ಊಹಿಸಿಕೊಳ್ಳುವುದಲ್ಲೂ ಸಹ ಉತ್ತಮ ಫಲಿತಾಂಶಗಳನ್ನು ಪಡೆಯಲಾಗುತ್ತದೆ. ಯೂಕ್ಲಿಡ್‌ನ ಸಂಪೂರ್ಣ ಕಕ್ಷೆಯು ಊಹೆಯಲ್ಲಿದೆ, ಇದರಿಂದ ಎಷ್ಟು ಪ್ರಯೋಜನಗಳಿವೆ. ಪ್ರಮುಖ ವಿಜ್ಞಾನಗಳ ನಿರ್ಮಾಣವು ಮೊದಲು ಊಹೆಯನ್ನು ಆಧರಿಸಿದೆ. ಆದುದರಿಂದ ವಿಶ್ವಾಸವನ್ನು ಸಹ ಊಹೆಯಾಗಿ ಸ್ವೀಕರಿಸಿದ್ದರೂ ಖಂಡಿತವಾಗಿಯೂ ಬರಿಗೈಯಲ್ಲಿ ಉಳಿಯುತ್ತಿರಲಿಲ್ಲ ಆದರೆ ಇಲ್ಲಿ ಈಗ ಮೊದಲಿನಿಂದಲೂ ಅದನ್ನೇ ಅರ್ಥಹೀನ ಎಂದು ಪರಿಗಣಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

**(ಮಲ್‌ಫೂಝಾತ್, ಸಂಪುಟ-2, ಪುಟ-41, ಆವೃತ್ತಿ 2018, ಖಾದಿಯಾನ್)**

-------------*****-------------

## ಜಲ್ಸ ಸಾಲಾನ ಖಾದಿಯಾನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಜಲ್ಸದೊಂದಿಗೆ ಅನೇಕ ಅನುಗ್ರಹಗಳು ಅನಿವಾರ್ಯವಾಗಿ ಸೇರಿಕೊಂಡಿರುವುದರಿಂದ ದಾರಿ ಖರ್ಚಿಗೆ ಸಾಮರ್ಥ್ಯವಿರುವ ಪ್ರತಿಯೊಬ್ಬನು ಈ ಜಲ್ಸಕ್ಕೆ ಆಗಮಿಸಬೇಕು. ಚಳಿಗಾಲಕ್ಕೆ ಆವಶ್ಯಕವಾದ ಹಾಸುವ ಮತ್ತು ಹೊದಿಕೆ ಬಟ್ಟೆಗಳನ್ನು ಆವಶ್ಯಕವಾದಷ್ಟು ತರಬೇಕು. ಅಲ್ಲಾಹನ ಮತ್ತು ಅವನ ರಸೂಲರ ಮಾರ್ಗದಲ್ಲಿ ಚಿಕ್ಕಪುಟ್ಟ ಅಡ್ಡಿ ಆತಂಕಗಳನ್ನು ನಿರ್ಲಕ್ಷಿಸಬೇಕು. ಅಲ್ಲಾಹನು ನಿಷ್ಠಾವಂತನಿಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅನುಗ್ರಹ ನೀಡುತ್ತಾನೆ. ಅವನ ಮಾರ್ಗದಲ್ಲಿ ಪಡುವ ಕಷ್ಟಗಳನ್ನು ವ್ಯರ್ಥಗೊಳಿಸುವುದಿಲ್ಲ. ನಾನು ಪುನರಾವರ್ತಿಸಿ ಬರೆಯುತ್ತೇನೆ ಈ ಜಲ್ಸವನ್ನು ಮಾನವರ ಸಾಮಾನ್ಯ ಜಲ್ಸದ ಹಾಗೆಂದು ಯೋಚಿಸಬೇಡಿರಿ. ಇದು ಸತ್ಯಕ್ಕೆ ಬೆಂಬಲ ನೀಡುವ ಮತ್ತು ಇಸ್ಲಾಮಿನ ಪ್ರಚಾರ ಮಾಡುವ ಅಸ್ತಿಭಾರವನ್ನು ಹೊಂದಿದೆ. ಈ ಜಮಾಅತಿನ ಅಸ್ತಿಭಾರವನ್ನು ಅಲ್ಲಾಹನು ತನ್ನ ಕೈಯಿಂದ ಹಾಕಿದ್ದಾನೆ. ಇದಕ್ಕೋಸ್ಕರ ಅಲ್ಲಾಹನು ಸಮುದಾಯಗಳನ್ನು ಸಿದ್ಧಪಡಿಸಿಟ್ಟಿದ್ದಾನೆ. ಅವರು ಬೇಗನೆ ಇದರಲ್ಲಿ ಬಂದು ಸೇರುವರು. ಯಾಕೆಂದರೆ ಇದು ಸರ್ವಶಕ್ತನಾದವನ ಕೆಲಸವಾಗಿದೆ. ಅವನಿಗೆ ಅಸಾಧ್ಯವಾದುದು ಏನೂ ಇಲ್ಲ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: "ಅಲ್ಲಾಹನಿಗೋಸ್ಕರ ಈ ಜಲ್ಸದಲ್ಲಿ ಭಾಗವಹಿಸಲು ಪ್ರಯಾಣ ಮಾಡುವ ಪ್ರತಿಯೊಬ್ಬನ ಜೊತೆಗೆ ಅಲ್ಲಾಹನು ಜೊತೆಗಾರನಾಗಿರಲಿ. ಅವನಿಗೆ ಬೃಹತ್ತಾದ ಪ್ರತಿಫಲ ನೀಡಲಿ. ಅವರೆಲ್ಲರಿಗೆ ಕಾರುಣ್ಯದೋರಲಿ. ಅವರ ಕಷ್ಟಗಳನ್ನೂ ಆತಂಕಭರಿತ ಸ್ಥಿತಿಯನ್ನೂ ನಿವಾರಿಸಿ ಅವರಿಗೆ ಸೌಲಭ್ಯ ನೀಡುವಂತಾಗಲಿ. ಅವರ ಚಿಂತೆಗಳನ್ನೂ ದುಃಖಗಳನ್ನೂ ದೂರ ಸರಿಸಲಿ. ಅವರಿಗೆ ಪ್ರತಿಯೊಂದು ಕಷ್ಟದಿಂದ ಮುಕ್ತಿಯನ್ನು ದಯಪಾಲಿಸಲಿ. ಅವರ ಇಚ್ಛೆಗಳ ಮಾರ್ಗಗಳನ್ನು ಅವರಿಗೆ ತೆರೆದುಕೊಡಲಿ. ಆಖಿರತ್‌ನಲ್ಲಿ ಅಲ್ಲಾಹನು ಅವರನ್ನು ತಾನು ಅನುಗ್ರಹ ಮತ್ತು ಕಾರುಣ್ಯ ನೀಡಿದ ತನ್ನ ದಾಸರೊಂದಿಗೆ ಎದ್ದೇಳಿಸಲಿ. ಅವರ ಪ್ರಯಾಣದ ಅಂತ್ಯದ ವರೆಗೂ ಅವರ ಬದಲು ಅವರ ಪ್ರತಿನಿಧಿಯಾಗಿರಲಿ. ಓ ಅಲ್ಲಾಹ್, ಕೀರ್ತಿಶಾಲಿಯೂ ವರದಾನ ನೀಡುವವನೂ ಕಾರುಣ್ಯಮಯನೂ ಕಷ್ಟ ಪರಿಹರಿಸುವವನೂ ಆಗಿರುವ ನೀನು ಈ ಎಲ್ಲ ಪ್ರಾರ್ಥನೆಗಳನ್ನೂ ಅಂಗೀಕರಿಸು. ನಮ್ಮ ವಿರೋಧಿಗಳ ವಿರುದ್ಧ ಪ್ರಕಾಶಮಾನವಾದ ದೃಷ್ಟಾಂತಗಳ ಮೂಲಕ ನಮಗೆ ಜಯವನ್ನು ನೀಡು. ಎಲ್ಲಾ ಶಕ್ತಿಸಾಮರ್ಥ್ಯಗಳು ನಿನ್ನಲ್ಲಿ ಮಾತ್ರ ಇವೆ" – ಆಮೀನ್ ಸುಮ್ಮ ಆಮೀನ್. **(ಮಜ್‌ಮೂಅ ಇಶ್ತಿಹಾರಾತ್ ಸಂಪುಟ-1 ಪುಟ 341-342, ಇಶ್ತಿಹಾರ್ 1892 ಡಿಸೆಂಬರ್ ದಿನಾಂಕ 7)**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

**Love for All, Hatred for None**

ಹುಝೂರ್(ಸ) ನುಡಿದರು: ***ಉರೀತುನ್ನಾರ ಫಇಝಾ ಅಕ್ಸರು ಅಹ್ಲಿಹನ್ನಿಸಾಉ ಯಕ್ಫುರೂನ್***
ಅಂದರೆ ನನಗೆ ನರಕದಲ್ಲಿ ತನ್ನ ಕರ್ಮಗಳಿಂದಾಗಿ ಮಹಿಳೆಯರೇ ಹೆಚ್ಚಾಗಿ ಕಂಡರು. ಅವರು ತನ್ನ ಪತಿಗೆ ಅವಿಧೇಯತೆ, ಕೃತಘ್ನತೆ ತೋರುವವರಾಗಿದ್ದರು.

## ಸಯ್ಯದ್ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರೊಡನೆ ಕೇಳಲಾದ ಪ್ರಮುಖ ಪ್ರಶ್ನೆಗಳ ವಿವೇಕಪೂರ್ಣ ಉತ್ತರಗಳು

**ಸೂಚನೆ:–** ಸಯ್ಯದ್ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ವಿವಿಧ ಸಂದರ್ಭಗಳಲ್ಲಿ ತನ್ನ ಪತ್ರಗಳಲ್ಲಿ ಮತ್ತು MTA ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಖ ಸಮಸ್ಯೆಗಳ ಕುರಿತು ನೀಡಲಾದ ನಿರ್ದೇಶನಗಳು. ಅವುಗಳಲ್ಲಿ ಕೆಲವು ಓದುಗರ ಹಿತದೃಷ್ಟಿಯಿಂದ ಅಲ್–ಫಝ್ಲ್ International ನ ಕೃಪೆಯಿಂದ ಪ್ರಕಟಿಸಲಾಗುತ್ತದೆ.

***(ಭಾಗ–2)***

**ಪ್ರಶ್ನೆ:** ಮಹಿಳೆಯೋರ್ವಳು ಇಸ್ಲಾಮಿನಲ್ಲಿ ಸ್ತ್ರೀ ಮತ್ತು ಪುರುಷರ ಸಮಾನತೆಯ ಕುರಿತು ತನ್ನ ಕೆಲ ಸಮಸ್ಯೆಗಳನ್ನು ವಿವರಿಸಿ ಇಸ್ಲಾಮಿನಲ್ಲಿರುವ ಕೆಲವು ಆಜ್ಞೆಗಳ ಕುರಿತು ಹುಝೂರ್ ಅನ್ವರ್ (ಅಬಿಅ) ರವರಲ್ಲಿ ಮಾರ್ಗದರ್ಶನ ಯಾಚಿಸಿದಳು. ಅದರ ಉತ್ತರವಾಗಿ ಹುಝೂರ್ ಅನ್ವರ್ ದಿನಾಂಕ: 11 ಏಪ್ರಿಲ್ 2016 ರ ತನ್ನ ಪತ್ರದಲ್ಲಿ ಈ ಕೆಳಗಿನ ಉತ್ತರವನ್ನು ನೀಡಿದರು.

**ಉತ್ತರ:** ನೀವು ಪತ್ರದಲ್ಲಿ ವಿವರಿಸಿದ ಆಕ್ಷೇಪಗಳು ಇಸ್ಲಾಂನ ಶಿಕ್ಷಣಗಳಿ ಮತ್ತು ಮಾನವ ಪ್ರಕೃತಿ ಮನವರಿಕೆಯಾಗದ ಕಾರಣದಿಂದಾಗಿ ಉದ್ಭವಿಸಿದೆ. ಇಸ್ಲಾಂ ಧರ್ಮವು ಎಲ್ಲಿಯೂ ಸಹ ಎಲ್ಲಾ ವಿಷಯಗಳಲ್ಲಿ ಸ್ತ್ರೀ ಪುರುಷರು ಸಮಾನರಾಗಿದ್ದಾರೆ ಎಂಬ ದಾವೆ ಮಾಡಲಿಲ್ಲ. ಇಸ್ಲಾಂ ಧರ್ಮವೇ ಏಕೆ ಮಾನವ ಪ್ರಕೃತಿ ಸಹ ಅದನ್ನು ಒಪ್ಪುವುದಿಲ್ಲ.

ಹೌದು ಇಸ್ಲಾಂ ಧರ್ಮವು ಅವಶ್ಯವಾಗಿ ಈ ಶಿಕ್ಷಣ ನೀಡಿದೆ. ಸತ್ಕರ್ಮಗಳ ವಿಷಯಗಳಲ್ಲಿ ಯಾವ ರೀತಿ ಅಲ್ಲಾಹನು ಪುರುಷರಿಗೆ ಅನುಗ್ರಹ ಮತ್ತು ತನ್ನ ಔದಾರ್ಯಗಳಿಂದ ದಯಪಾಲಿಸುತ್ತಾನೋ ಅದೇ ರೀತಿ ಸ್ತ್ರೀಯರಲ್ಲಿ ತನ್ನ ಅನುಗ್ರಹ ಔದಾರ್ಯಗಳಿಂದ ದಯಪಾಲಿಸುತ್ತಾನೆ. ಅಲಾಹನು ಹೇಳುತ್ತಾನೆ. **ಫಸ್ತಜಾಬಲಹುಮ್ ರಬ್ಬುಹುಮ್ ಅನ್ನಿ ಲಾ ಅಝೀಉ ಅಮಲ ಆಮಿಲಿನ್ ಮಿಂಕುಮ್ ಮಿನ್ ಝಕರಿನ್ ಔ ಉನ್ಸಾ ಬಝುಕುಮ್ ಮಿನ್ ಬಝಿನ್ ಫಲ್ಲಝೀನ ಹಾಜರೂ ವ ಅಖ್ರಿಜೂ ಮಿನ್ ದಿಯಾರಿಹಿಮ್ ವೂಝೂ ಫೀ ಸಬೀಲಿ ವಖಾತಿಲೂ ವ ಖುತಿಲೂ ಲುಕಫ್ಫಿರನ್ನ ಅನ್ಹುಮ್ ಸಯ್ಯಿಆತಿಹಿಮ್ ವಲಉದ್ಖಿಲನ್ನಹುಮ್ ಜನ್ನಾತಿನ್ ತಜ್ರೀ ಮಿನ್ ತಹ್ತಿಹಲ್ ಅನ್ಹಾರು ಸವಾಬಮ್ಮಿನ್ ಇಂದಿಲ್ಲಾಹಿ ವಲ್ಲಾಹು ಇಂದಹೂ ಹುಸ್ನುಸ್ಸವಾಬ್** (ಸೂರಃ ಅಲಿ ಇಮ್ರನ್: 196)

ಅನುವಾದ: ಹಾಗೆ ಅವರ ಪ್ರಭೂ ಅವರ ಪ್ರಾರ್ಥನೆಗೆ ಉತ್ತರವಿತ್ತನು. ಖಂಡಿತವಾಗಿಯೂ ನಿಮ್ಮ ಪೈಕಿ ಪುರುಷನಾಗಲಿ, ಸ್ತ್ರೀಯಾಗಲಿ, ಯಾರ ಕರ್ಮವನ್ನೂ ನಾನು ನಿಷ್ಫಲಗೊಳಿಸಲಾರೆ. ನಿಮ್ಮಲ್ಲಿ ಕೆಲವರಿಗೆ ಕೆಲವರೊಡನೆ, (ಪರಸ್ಪರ) ಸಂಬಂಧವಿದೆ. ಆದ್ದರಿಂದ (ಧರ್ಮ ಸಂರಕ್ಷಣೆಗಾಗಿ) ಸ್ವದೇಶವನ್ನು ತೊರೆದ, ತಮ್ಮ ಗೃಹಗಳಿಂದ ಹೊರಹಾಕಲ್ಪಟ್ಟ, ನನ್ನ ಮಾರ್ಗದಲ್ಲಿ ದೌರ್ಜನ್ಯಕ್ಕೆ ಗುರಿಯಾದ, ಧರ್ಮಯುದ್ಧ ಮಾಡಿದ, ವಧಿಸಲ್ಪಟ್ಟ ಜನರಿಗೆಲ್ಲ ನಿಶ್ಚಯವಾಗಿಯೂ ಅವರ ಕೆಡುಕುಗಳನ್ನು ನಾನು ತೊಡೆದು ಹಾಕುವೆನು. ಕೆಳಭಾಗದಲ್ಲಿ ಸರಿತ್ತುಗಳು ಹರಿಯುವ ಸ್ವರ್ಗೀಯ ತೋಟಗಳಲ್ಲಿ ಅವರಿಗೆ ಪ್ರವೇಶ ನೀಡುವೆನು. ಇದು ಅಲ್ಲಾಹನ ಕಡೆಯಿಂದ ಪ್ರತಿಫಲವಾಗಿದೆ. ಅತ್ಯುತ್ತಮವಾದ ಪ್ರತಿಫಲವಿರುವುದು ಅಲ್ಲಾಹನ ಬಳಿಯಲ್ಲಿದೆ.

ಸಾಕ್ಷ್ಯ ವಿಷಯಗಳಲ್ಲಿ ಪುರುಷರಿಗೆ ಸಂಬಂಧಿಸಿದ್ದರೆ ಮತ್ತು ಸ್ತ್ರೀಯರೊಡನೆ ನೇರ ಸಂಬಂಧವಿಲ್ಲದಿದ್ದರೆ ಸಾಕ್ಷ್ಯವಾಗಿ ನಿಗದಿಪಡಿಸಿದ ಪುರುಷರು ಲಭ್ಯವಾಗದಿದ್ದಲ್ಲಿ ಒಬ್ಬ ಪುರುಷನ ಜೊತೆಯಲ್ಲಿ ಇಬ್ಬರು ಸ್ತ್ರೀಯರನ್ನು ನೇಮಿಸಲಾಗಿದೆ. ಏಕೆಂದರೆ ಈ ವ್ಯವಹಾರದಲ್ಲಿ ಸ್ತ್ರೀಯರಿಗೆ ನೇರವಾದ ಸಂಬಂಧವಿಲ್ಲ. ಆದುದರಿಂದ ಸಾಕ್ಷಿ ನೀಡುವ ಸ್ತ್ರೀಯು ತನ್ನ ಸಾಕ್ಷಿ ಮರೆತರೆ ಇನ್ನೊಬ್ಬರು ಅವರನ್ನು ನೆನಪಿಸಬಹುದು. ಅಂದ ಹಾಗೆ ಇಲ್ಲಿಯೂ ಸಾಕ್ಷಿ ಒಬ್ಬ ಮಹಿಳೆಯದ್ದೇ ಆಗಿದೆ. ಕೇವಲ ಇಂತಹ ವ್ಯವಹಾರಗಳಲ್ಲಿ ಸಂಬಂಧವಿಲ್ಲದ ಕಾರಣ, ಆ ವಿಷಯ ಮರೆತು ಬಿಡುವ ಸಂಭವವಿರುವ ಕಾರಣ ಇನ್ನೊಬ್ಬ ಮಹಿಳೆಯೇ ಅವರ ಸಹಾಯಕ್ಕಾಗಿ, ಆ ಮಾತನ್ನು ನೆನಪಿಸಲು ಇಡಲಾಗಿದೆ. ಪವಿತ್ರ ಖುರ್‌ಆನ್‌ನ್ನೂ ಸಹ ಅದೇ ವಿಷಯಕ್ಕೆ ಇಂಬು ನೀಡುತ್ತಿದೆ. ಅಂದ ಹಾಗೆ ಹೇಳಿದನು. **ಯಾಅಯ್ಯುಹಲ್ಲಝೀನ ಆಮನೂ ಇಝಾ ತದಾಯನ್ತುಮ್ ಬಿದೈನಿನ್ ಇಲಾ ಅಜಲಿನ್ ಮುಸಮ್ಮಾ ಫಕ್ತುಬೂಹೂ..... ವಸ್ತಶ್ಹಿದೈನಿ ಮಿರ್ರಿಜಾಲಿಕುಮ್, ಫಇಲ್ಲಮ್ ಯಕೂನ ರಜುಲೈನಿ ಫರಜುಲುವ್ವಮ್ರಅತಾನಿ ಮಿಮ್ಮನ್ ತರ್‌ಝೂನ ಮಿನಶ್ಶುಹದಾಇ ಇನ್ ತಝಿಲ್ಲ ಇಹ್ದಾಹುಮಾ ಫತುಝಕ್ಕಿರ ಇದ್ಹಾಹುಮಲ್ ಉಖ್ರಾ** (ಸೂರಃ ಅಲ್‌ಬಖರ–283).

ಅನುವಾದ : ಓ ವಿಶ್ವಾಸಿಗಳೇ, ನೀವು ಒಂದು ನಿರ್ಧಿಷ್ಟ ಅವಧಿಗೆ ಪರಸ್ಪರ ಸಾಲದ ವ್ಯವಹಾರ ಮಾಡುವಾಗ ಅದನ್ನು ಬರೆದಿಟ್ಟುಕೊಳ್ಳಿರಿ. ನಿಮ್ಮ ಮಧ್ಯೆ ಒಬ್ಬ ಬರಹಗಾರನು ನ್ಯಾಯೋಚಿತವಾಗಿ ಬರೆಯಲಿ. ಯಾವ ಬರಹಗಾರನು ಅದನ್ನು ಬರೆಯಲು ನಿರಾಕರಿಸಬಾರದು. ಕಾರಣವೇನೆಂದರೆ, ಅಲ್ಲಾಹನು ಆತನಿಗೆ ಬರೆಯಲು ಕಲಿಸಿದ್ದಾನೆ. ಆದ್ದರಿಂದ ಆತನು ಬರೆಯಲೇಬೇಕಾಗಿದೆ. ಬರೆಯಬೇಕಾದ ವಾಕ್ಯಗಳನ್ನು (ಸಾಲಕ್ಕೆ) ಬಾಧ್ಯನಾದವನು (ಸಾಲಗ್ರಾಹಿ) ಹೇಳಿಕೊಡಬೇಕು. ಆತನು ತನ್ನ ಪ್ರಭುವಾದ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಹಾಗೂ ಅದರಿಂದ (ಸಾಲದ ಮೊತ್ತದಿಂದ) ಏನನ್ನೂ ಕಡಿಮೆಗೊಳಿಸದಿರಲಿ. ಆದರೆ (ಸಾಲಕ್ಕೆ) ಬಾಧ್ಯನಾದವನು ಅವಿವೇಕಿಯೋ ಬಲಹೀನನೋ ಹೇಳಿಕೊಟ್ಟು ಬರೆಯಿಸಲು ಅಸಮರ್ಥನೋ ಆಗಿದ್ದರೆ, ಆತನ ರಕ್ಷಕನು (ಆತನಿಗೋಸ್ಕರ) ನ್ಯಾಯಯುತವಾಗಿ ವಾಕ್ಯಗಳನ್ನು ಹೇಳಿ ಬರೆಯಿಸಬೇಕಾಗಿದೆ. ನಿಮ್ಮ ಪೈಕಿ ಇಬ್ಬರು ಪುರುಷರಿಲ್ಲವಾದರೆ ನೀವು ಇಷ್ಟಪಡುವ ಒಬ್ಬ ಪುರುಷ ಮತ್ತು ಇಬ್ಬರು ಸ್ತ್ರೀಯರು ಸಾಕ್ಷಿಗಳಾಗಲಿ, ಅವರೀರ್ವರಲ್ಲಿ ಒಬ್ಬಳು ಮರೆತರೆ ಇನ್ನೊಬ್ಬಳು ನೆನಪಿಸಿಕೊಳ್ಳಲಿಕ್ಕಾಗಿದೆ.

ಹದೀಸಿನಿಂದ ಸಾಬೀತಾಗಿದೆ. ಎಲ್ಲಿಯವರೆಗೆ ಮಹಿಳೆಯರ ಯಾವ ಸಮಸ್ಯೆಗೆ ನೇರವಾದ ಸಂಬಂಧವಿದೆಯೋ, ಅಲ್ಲಿ ಹುಝೂರ್(ಸ) ಮಹಿಳೆಯೊಬ್ಬಳು ವಿವಾಹಿತ ಹುಡುಗ ಮತ್ತು ಹುಡುಗಿಗೆ ಇಬ್ಬರಿಗೂ ಮೊಲೆಯುಣಿಸಿದ್ದಳು. ಅದು ಗೊತ್ತಾದ ತಕ್ಷಣ ಕೇವಲ ಒಬ್ಬ ಮಹಿಳೆಯ ಸಾಕ್ಷಿಯ ಮೇಲೆ, ಅವರನ್ನು ಪ್ರತ್ಯೇಕಗೊಳಿಸಲಾಯಿತು.

ಹಝ್ರತ್ ಅಬ್ಬ ಬಿನ್ ಹಾರಿಸ್(ರ) ವರದಿ ಮಾಡುತ್ತಾರೆ: ಅವರ ವಿವಾಹವು ಅಬೂ ವಹಾಬ್ ಬಿನ್ ಅಝೀಝುರ್ ಅವರೊಂದಿಗಾಯಿತು. ಕೆಳವು ಸಮಯದ ನಂತರ ಮಹಿಳೆಯೊಬ್ಬಳು ಬಂದು ಹೇಳಿದಳು. ನಾನು ಅಬ್ಬ ಮತ್ತು ಆ ಮಹಿಳೆಗೆ (ಯಾರನ್ನು ಅಬ್ಬ ವಿವಾಹವಾಗುತ್ತಿದ್ದಾರೆ) ಮೊಲೆಯುಣಿಸಿರುತ್ತೇನೆ. (ಆದುದರಿಂದ ಈ ಇಬ್ಬರು ರಝಾಯಿ ಬೆಹನ್ ಭಾಯಿ) ಅಂದರೆ ಹಾಲುಂಡ ಸಹೋದರ ಸಹೋದರಿಯಾಗಿದ್ದಾರೆ. ಆದುದರಿಂದ ಅವರ ವಿವಾಹ ತರ್ಕಬದ್ಧವಲ್ಲ. ಅಬ್ಬ ಹೇಳಿದರು. ನೀನು ಹಾಲುಣಿಸಿದ್ದು ನನಗೆ ಗೊತ್ತಿಲ್ಲ. ಅಷ್ಟೇಕೆ ಈ ವಿಷಯ ಕುರಿತು ನೀನು ಎಂದೂ ಹೇಳಲಿಲ್ಲ. ಮತ್ತೆ ಅಬ್ಬ ರಸೂಲುಲ್ಲಾಹ್(ಸ) ರವರ ಬಳಿ ಮದೀನಕ್ಕೆ ಹೋದರು. ಅವರೊಂದಿಗೆ ಈ ಸಮಸ್ಯೆ ಕುರಿತು ಹೇಳಿದರು. ನಬಿ(ಸ) ಹೇಳಿದರು. ಈ ಮಾತು ಸ್ಪಷ್ಟವಾದ ನಂತರ ನೀವು ಅವಳಿಗೆ ವಿವಾಹದಲ್ಲಿರಿಸಲು ಹೇಗೆ ಸಾಧ್ಯ. ಹಾಗೆ ಅಬ್ಬ ಅವಳನ್ನು ಬಿಟ್ಟುಬಿಟ್ಟರು. ಮತ್ತು ಅವಳು ಬೇರೆ ವ್ಯಕ್ತಿಯೊಂದಿಗೆ ವಿವಾಹವಾದಳು (ಸಹೀ ಬುಖಾರಿ)

ತಲಾಖ್, ಖುಲಾ ವಿಷಯದಲ್ಲೂ ಯಾವ ವ್ಯತ್ಯಾಸವಿಲ್ಲ. ಬದಲು ಇಸ್ಲಾಮ್ ಧರ್ಮದ ಉಪಕಾರವಿದೆ. ಅದು ಪುರುಷನನ್ನು ತಲಾಖ್ ಕೊಡುವ ಹಕ್ಕು ನೀಡುವ ಜೊತೆಯಲ್ಲಿ ಹೆಣ್ಣಿಗೂ ಖುಲಾ ಬಯಸುವ ಹಕ್ಕು ನೀಡಿದೆ. ಅದರಲ್ಲೂ ಸ್ತ್ರೀ ಪುರುಷರಿಗೆ ಸಮಾನ ಹಕ್ಕು ನೀಡಲಾಗಿದೆ. ಪುರುಷನು ತಲಾಖ್ ಕೊಡುವವನಾದರೆ ಅವನಿಗೆ ಹೆಣ್ಣಿನ ಎಲ್ಲಾ ಸಾಂಪತ್ತಿಕ ಹಕ್ಕುಗಳನ್ನು ನೀಡಬೇಕಾಗುತ್ತದೆ. ಅಲ್ಲದೇ ಈ ಹಿಂದೆ ಹೆಣ್ಣಿಗೆ ನೀಡಲಾದ ಸಾಂಪತ್ತಿಕ ಕೊಡುಗೆ ಹಿಂಪಡೆಯುವಂತಿಲ್ಲ ಅದೇ ರೀತಿ ಹೆಣ್ಣು ತನ್ನ ಮರ್ಜಿಯಿಂದ ಪತಿಯು ಯಾವುದೇ ತಪ್ಪಿಲ್ಲದಿದ್ದರೂ ಖುಲಾ ಬಯಸುವುದಾದರೆ ಅವಳಿಗೂ ಸಹ ಪುರುಷನ ಕೆಲ ಸಾಂಪತ್ತಿಕ ಹಕ್ಕುಗಳನ್ನು, ಉದಾಹರಣೆಗೆ ಮಹರ್ (ವಿವಾಹ ನಿಧಿ) ಹಿಂದಿರುಗಿಸಬೇಕಾಗುತ್ತದೆ. ಆದರೆ ಹೆಣ್ಣು ಖುಲಾ ಪಡೆಯುವಲ್ಲಿ ಪುರುಷನ ದೌರ್ಜನ್ಯವೇನಾದರೂ ಸಾಬೀತಾದರೆ ಆ ಸಂದರ್ಭದಲ್ಲಿ ಹೆಣ್ಣಿಗೆ ಈ ಹೆಚ್ಚಿನ ಅವಕಾಶ ನೀಡಲಾಗಿದೆ. ಅವಳು ಮಹರ್ (ವಿವಾಹ ನಿಧಿ) ಸಹ ಇಟ್ಟುಕೊಳ್ಳಬಹುದಾಗಿದೆ. ಅಂತೂ ಆ ನಿರ್ಣಯದ ಹಕ್ಕು ಖಾಝಿಗೆ ಇರುತ್ತದೆ. ಅವರು ಪರಿಸ್ಥಿತಿಗಳನ್ನು ಅವಲೋಕಿಸಿ ತೀರ್ಪು ನೀಡುತ್ತಾರೆ.

ಗ್ರಂಥದವರಿಂದ ವಿವಾಹವಾಗುವ, ವಲಿ (ಸಾಕ್ಷಿ) ಯ ಅಗತ್ಯವಿದ್ದಲ್ಲಿ ಮತ್ತು ಪುರುಷನು ಒಂದಕ್ಕಿಂತ ಹೆಚ್ಚು ವಿವಾಹ ಬಯಸುವಂತಹ

ವ್ಯವಹಾರಗಳಲ್ಲಿ, ವಾಸ್ತವದಲ್ಲಿ ಹೆಣ್ಣಿನ ರಕ್ಷಣೆ, ಗೌರವ ಮತ್ತು ಮಾನವನ್ನು ಪರಿಗಣಿಸಲಾಗಿದೆ. ಹೆಣ್ಣಿಗೆ ಅಲ್ಲಾಹನು ಪುರುಷರಿಗಿಂತ ಸಾಮಾನ್ಯವಾಗಿ ಸೂಕ್ಷ್ಮ ಮತ್ತು ಪ್ರಭಾವದಲ್ಲಿ ಪ್ರಭಾವಕ್ಕೊಳಗಾಗುವ ಪ್ರಕೃತಿ ಇಟ್ಟಿರುತ್ತಾನೆ. ಅಂದ ಹಾಗೆ ಓರ್ವ ಮುಸ್ಲಿಂ ಮಹಿಳೆಯನ್ನು ಗ್ರಂಥದವರ ಪುರುಷರೊಡನೆ ವಿವಾಹದಿಂದ ತಡೆದಿರುವುದು ಅವಳ ಧರ್ಮರಕ್ಷಣೆಯಿಂದಾಗಿದೆ.

ವಿವಾಹ ವಿಷಯದಲ್ಲಿ ಹುಡುಗಿಯ ರಾಜಿ ಕೇಳುವ ಜೊತೆಯಲ್ಲಿ ಅವಳ ವಲಿ ತಂದೆಯ ರಾಜಿ ಕೇಳುವ ಉದ್ದೇಶ, ಹೆಣ್ಣಿಗಿರುವ ಪ್ರಯೋಜನಗಳಲ್ಲಿ ಒಂದು ಪ್ರಯೋಜನವೇನೆಂದರೆ, ಮಹಿಳೆಗೆ ಒಂದು ರೀತಿಯ ನೆರವು ಮತ್ತು ಸುರಕ್ಷತೆ ನೀಡುವುದಾಗಿದೆ. ಮಹಿಳೆಯು ವಿವಾಹವಾದ ನಂತರ ಅವಳ ವಿವಾಹಿತ ಸಂಬಂಧಿಕರಿಗೆ ತಿಳಿದಿರಲಿ. ಮಹಿಳೆಯು ನಿರಾಶ್ರಿತಳಲ್ಲ, ಬದಲು ಅವಳ ಸಂರಕ್ಷಕರು ಇದ್ದಾರೆ ಎಂದು ಜ್ಞಾಪಿಸಲು ಆಗಿದೆ.

ಮಹಿಳೆಗೆ ಒಂದು ಸಮಯದಲ್ಲಿ ಒಂದೇ ವಿವಾಹವಾಗುವ ಅನುಮತಿ ನೀಡಿ ಇಸ್ಲಾಂ ಧರ್ಮವು ಅವಳ ಮಾನ ಕಾಪಾಡಿದೆ ಮತ್ತು ಮನುಷ್ಯನ ಸ್ವಾಭಿಮಾನ ಹಾಗೂ ಮಾನವ ಪ್ರಕೃತಿಗೆ ಅದು ತಕ್ಕುದಾದ ಆಜ್ಞೆ ಆಗಿದೆ.

ಯಾವ ಹದೀಸಿನಲ್ಲಿ ಮಹಿಳೆಯರು ನರಕದಲ್ಲಿ ಹೆಚ್ಚಿರುವ ವಿವರ ಬಂದಿದೆ. ಅಲ್ಲಿ ಜನರಿಗೆ ಆ ಹದೀಸಿನ ಭಾಷಾಂತರ ಅರಿಯುವುದರಲ್ಲಿ ತಪ್ಪಾಗಿದೆ. ಆ ಹದೀಸಿನ ಅರ್ಥ ನರಕದಲ್ಲಿ ಮಹಿಳೆಯರು ಹೆಚ್ಚಾಗಿರುವವರು ಎಂದಲ್ಲ. ಬದಲು ಹುಝೂರ್(ಸ) ಹೇಳಿದರು. **ಉರೀತು ನ್ನಾರ ಫಇಝಾ ಅಕ್ಸರು ಅಹ್ಲಿಹನ್ನಿಸಾ ಹಕ್ಫುರೂನ್** ಅಂದರೆ ನನಗೆ ಕೃತಘ್ನರಾದ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿದ್ದರು. ಅಂದರೆ ಯಾವ ಮಹಿಳೆಯರು ತಮ್ಮ ಕರ್ಮಗಳಿಂದಾಗಿ ನರಕದಲ್ಲಿದ್ದರು ಅವುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನರಕದಲ್ಲಿದ್ದವರೆಂದರೆ, ಪತಿಯರಿಗೆ ಕೃತಘ್ನರಾದವರು.

ಆದುದರಿಂದ ಈ ಹದೀಸಿನ ತಾತ್ಪರ್ಯ ನರಕದಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚಾಗಿರುವವರು ಎಂಬುದು ಖಂಡಿತ ಅಲ್ಲ. ಎರಡನೆಯದಾಗಿ ಇಲ್ಲಿ ಮಹಿಳೆಯರಿಗೆ ನರಕಕ್ಕೆ ಹೋಗಲು ಕಾರಣ ಸಹ ತಿಳಿಸಲಾಗಿದೆ. ಅವರು ಸಣ್ಣ ಸಣ್ಣ ವಿಷಯದಲ್ಲಿ ಅಲ್ಲಾಹನ ಅನುಗ್ರಹಗಳನ್ನು ಉಪೇಕ್ಷಿಸಿ ಕೃತಘ್ನತೆ ತೋರಿಸುವರು. ಅದು ಅವರ ಪತಿಯರ ಮೂಲಕ ಅಲ್ಲಾಹನು ಅವರ ಮೇಲೆ ದಯಪಾಲಿಸಿರುತ್ತಾನೆ.

ಮತ್ತೆ ಅದಕ್ಕೆ ವಿರುದ್ಧವಾಗಿ ಹದೀಸುಗಳಲ್ಲಿ ಸತ್ಕರ್ಮಿಗಳಾದ ಹಾಗೂ ಸಜ್ಜನರಾದ ಮಹಿಳೆಯರ ಪಾದದಡಿಯಲ್ಲಿ ಸ್ವರ್ಗವಿರುವ ಸುವಾರ್ತೆಯು ನೀಡಿದೆ. ಅದು ಯಾವ ಪುರುಷರ ಕುರಿತು ಇಲ್ಲ.

ಅದಲ್ಲದೇ ಇಸ್ಲಾಂ ಧರ್ಮವು ಪುರುಷರ ಮತ್ತು ಸ್ತ್ರೀಯರ ಕೆಲ ಹಕ್ಕುಗಳ ಹಾಗೂ ಕರ್ತವ್ಯಗಳ ಕುರಿತು ಅವರ ಪ್ರಕೃತಿಗನುಗುಣವಾಗಿ ಬೇರೆ ಬೇರೆ ನಿಗದಿಪಡಿಸಿದೆ. ಪುರುಷನಿಗೆ ಶ್ರಮವಹಿಸಿ ಕುಟುಂಬದ ಎಲ್ಲಾ ಅಗತ್ಯಗಳನ್ನು ಪೂರ್ಯಸಬೇಕೆಂದು ಕಡ್ಡಾಯಗೊಳಿಸಾಯಿತು ಮತ್ತು ಮಹಿಳೆಯರಿಗೆ ಕುಟುಂಬ ಮತ್ತು ಮಕ್ಕಳ ರಕ್ಷಣೆ ಹಾಗೂ ತರಬೇತಿಯ ಹೊಣೆ ನೀಡಲಾಯಿತು. ಅಂದರೆ ಹೊರಗಿನ ಓಡಾಟ ಶ್ರಮ ಪುರುಷನ ಸಾಮರ್ಥ್ಯಕೆ ತಕ್ಕಂತೆ ಇದ್ದುದ್ದನ್ನು ಕಂಡು ಅದಕ್ಕಾಗಿ ಆಯ್ದುಕೊಂಡನು. ಮತ್ತು ಹೆಣ್ಣಿನ ಪೃಕೃತಿಗನುಗುಣವಾಗಿ ಅವಳ ಗೌರವ ದೃಷ್ಟಿಯಿಂದ ಕೌಟುಂಬಿಕ ಉಸ್ತುವಾರಿಯ ಹೊಣೆ ನೀಡಿದನು.

ಹಝ್ರತ್ ರಸೂಲುಲ್ಲಾಹ್(ಸ) ರವರ ಉಪದೇಶವಿದೆ. ಸ್ತ್ರೀಯರಲ್ಲಿ ಧರ್ಮ ಮತ್ತು ಬುದ್ಧಿಯಲ್ಲಿ ಒಂದು ರೀತಿಯ ಕೊರತೆಯಿದೆ ಅದರಲ್ಲಿ ಯಾವ ಸಂಶಯವೂ ಇಲ್ಲ. ಏಕೆಂದರೆ ಇದು ಸಹ ಹೆಣ್ಣಿನ ಪ್ರಕೃತಿಗೆ ಅನುಗುಣವಾಗಿ ಈ ಮಾತನ್ನು ಹೇಳಲಾಗಿದೆ. ಧರ್ಮದ ಕೊರತೆ ಅಂತೂ ಹಝ್ರತ್ ರಸೂಲುಲ್ಲಾಹ್(ಸ) ಸ್ವಯಂ ವಿವರಿಸಿಕೊಟ್ಟಿದ್ದಾರೆ. ಹೆಣ್ಣಿನ ವಯಸ್ಸಿನ ಒಂದು ದೀರ್ಘ ಅವಧಿಯವರೆಗೆ ಪ್ರತಿ ತಿಂಗಳ ಕೆಲ ದಿನಗಳು ಎಲ್ಲ ಪ್ರಕಾರದ ಆರಾಧನೆಗಳಿಂದ ಬಿಡುವಿರುವ ದಿನವೂ ಇರುತ್ತದೆ. ಹಾಗೆ ನೋಡಿದರೆ ಇದು ಸಹ ಒಂದು ರೀತಿಯಲ್ಲಿ ಅಲ್ಲಾಹನ ಉಪಕಾರವಾಗಿದೆ. ಅದಾಗ್ಯೂ ಬುದ್ಧಿ ಕಡಿಮೆ ಎಂಬ ಮಾತು ಮಹಿಳೆಯನ್ನು ಅಪಹಾಸ್ಯಕ್ಕಾಗಿ ಹೇಳಲಾಗಲಿಲ್ಲ, ಬದಲು ಅದರ ತಾತ್ಪರ್ಯ ಮಹಿಳೆಯ ಸರಳತೆ ಆಗಿದೆ. ಅದರ ಸಾಕ್ಷಿ ಇಂದು ಮಹಿಳೆ ಸ್ವಯಂ ಪ್ರದರ್ಶಿಸಿದೆ. ಏಕೆಂದರೆ ಪಾಶ್ಚಿಮಾತ್ಯ ಲೋಕದ ಪುರುಷರು ಸ್ವಾತಂತ್ರ್ಯದ ಹೆಸರಿನಲ್ಲಿ ತನ್ನ ಪ್ರಯೋಜನಕ್ಕಾಗಿ ಯಾವ ರೀತಿ ಹೆಣ್ಣುಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಅದು ಎಲ್ಲರ ಮುಂದಿದೆ. ಹಾಗೆ ಸತ್ಯಸಂಧರಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರ ಆ ಹೇಳಿಕೆ ಸ್ಪಷ್ಟ ಸಾಕ್ಷ್ಯವಾಗಿದೆ.

ಪುರುಷನು ತನ್ನ ದಾಹ ತೀರಿಸಿಕೊಳ್ಳಲು ಅವಳಿಗೆ ಮನೆಯ ನಾಲ್ಕು ಗೋಡೆಗಳಿಂದ ಹೊರ ತಂದು ಪೇಟೆಯಲ್ಲಿ ತಂದಿಟ್ಟಿದ್ದಾನೆ. ಇಸ್ಲಾಂ ಧರ್ಮವು ದಿನೋಪಚಾರದ ಹೊಣೆ ಪುರುಷರಿಗೆ ಹೊತ್ತಿಸಿ, ಮಹಿಳೆಯರ ಸರಳತೆಯ ಉಪಯೋಗ ಪಡೆಯಲು ಹೊಣೆಗಾರಿಕೆಯನ್ನು ವಿಂಗಡಿಸಿದ್ದನು. ಪುರುಷನು ಅದರಲ್ಲಿಯೂ ಹಸ್ತಕ್ಷೇಪ ನಡೆಸಿ ಮಹಿಳೆಯರನ್ನು ದುರುಪಯೋಗಪಡಿಸಿಕೊಂಡರು. ಪುರುಷರಂತೆ ವಿವಿಧ ವಿಭಾಗಗಳಲ್ಲಿ ಬಳಸಿಕೊಂಡರೂ ತಾನೇ ಅವಳ ಮೇಲೆ ತನ್ನ ದಾಹ ತೀರಿಸಿಕೊಳ್ಳಲು ಕೆಟ್ಟ ದೃಷ್ಟಿ ಹಾಗೂ ಕೆಟ್ಟ ಪ್ರಯತ್ನಗಳಿಗೆ ಮುಂದಾಗುತ್ತಾರೆ.

ಸರಿಯಾಗಿ ಯೋಚಿಸಿ ನೋಡುವುದಾದರೆ ಪಶ್ಚಿಮ ಲೋಕದ ಸ್ತ್ರೀ ಪುರುಷರು ಸಮಾನರು ಎಂಬ ಘೋಷಣೆಯು ಕೇವಲ ಒಂದು ಟೊಳ್ಳು ಘೋಷಣೆಯಾಗಿದೆ. ಅದೇ ಪಶ್ಚಿಮ ಲೋಕದಲ್ಲಿ ಪುರುಷರ ಸಮಾನ ಸ್ತ್ರೀಯರು ಆಡಳಿತ ನಡೆಸುವಂತಹ ಯಾವ ಒಂದು ದೇಶವು ಇಲ್ಲ. ಅದೇ ಪಶ್ಚಿಮ ದೇಶಗಳಲ್ಲಿ ಹಲವು ಸ್ಥಳಗಳಲ್ಲಿ ಯಾವ ರೀತಿ Package ಒಬ್ಬ ಪುರುಷನಿಗೆ ನೀಡಲಾಗುತ್ತದೋ ಸಾಮಾನ್ಯವಾಗಿ ಅದೇ ಹುದ್ದೆ ಸ್ತ್ರೀಗೆ ನೀಡಲಾಗುವುದಿಲ್ಲ. ಇಸ್ಲಾಂ ಮಾತುಗಳು ಮಹಿಳೆಯ ಸರಳತೆಗೆ ಹಿಡಿದ ಕನ್ನಡಿಯಾಗಿದೆ.

ಎಲ್ಲಿಯವರೆಗೆ ಪವಿತ್ರ ಖುರ್‌ಆನ್‌ನಲ್ಲಿ ಪುರುಷರಿಗೆ ಮೇಲುಸ್ತುವಾರಿಕೆ ನೀಡಿದ ವಿಷಯವಿದೆಯೋ ಸ್ವಯಂ ಪವಿತ್ರ ಖುರ್‌ಆನ್ ಅದರ ಕಾರಣಗಳನ್ನು ವಿವರಿಸಿಕೊಟ್ಟಿದೆ. ಒಂದು ಕಾರಣ ಹೀಗೆ ಹೇಳಲಾಗಿದೆ. ಅಲ್ಲಾಹನು ಅವರ ಪೈಕಿ ಕೆಲವರಿಗೆ ಬೇರೆ, ಕೆಲವರಿಗಿಂತ (ಪುರುಷರಿಗೆ ಸ್ತ್ರೀಯರಿಗಿಂತ) ಕೆಲವು ಮೇಲ್ಮೈಯನ್ನು ಕೊಟ್ಟಿರುವುದರಿಂದಲೂ ಅವರು ತಮ್ಮ ಧನವನ್ನು ಖರ್ಚು ಮಾಡುತ್ತಾರೆ.

ಒಬ್ಬರ ಪೈಕಿ ಇನ್ನೊಬ್ಬರಿಗೆ ನೀಡಲಾದ ಮೇಲ್ಮೈ ಮಾನವ ಪ್ರಕೃತಿಗೆ ಅನುಗುಣವಾಗಿದೆ. ಏಕೆಂದರೆ ನಾವು ಲೋಕದ ವ್ಯವಸ್ಥೆಯಲ್ಲಿ ಕಾಣುತ್ತೇವೆ. ಎಲ್ಲಾ ಕಡೆ ಒಬ್ಬರ ಪೈಕಿ ಇನ್ನೊಬ್ಬನು ಕೆಳದರ್ಜೆಯಲ್ಲಿರುತ್ತಾನೆ. ಒಂದು ವೇಳೆ ಲೋಕದಲ್ಲಿ ಎಲ್ಲ ಜನರು ಸಮಾನರೆಂದು ಆಗುತ್ತಿದ್ದರೆ, ಅಥವಾ ಹೀಗೆ ಹೇಳಬಹುದು. ಎಲ್ಲ ಜನರು ಬಾದಶಾಹರಾದರೆ (ಅರಸರಾದರೆ) ಈ ಲೋಕವು ಒಂದು ದಿನವು ನಡೆಯುವುದಿಲ್ಲ. ಆದುದರಿಂದ ಅಲ್ಲಾಹನು ಕೆಲ ಜನರಿಗೆ ದೊಡ್ಡವರು ಮತ್ತು ಕೆಲವರಿಗೆ ಸಣ್ಣವರು, ಕೆಲವರಿಗೆ ಶ್ರೀಮಂತರು ಮತ್ತು ಕೆಲವರಿಗೆ ಬಡವರನ್ನಾಗಿ ಮಾಡಿದನು. ನಾವು ನೋಡಬಹುದಾಗಿದೆ. ಎಲ್ಲಾ ದೇಶಗಳಲ್ಲಿ ಎಲ್ಲಾ ಜನರಿಗೆ ಸಂಪುಟದ ಭಾಗವನ್ನಾಗಿ ಮಾಡಿಕೊಂಡರೆ ಆ ದೇಶ ನಡೆಯಲು ಸಾಧ್ಯವಾಗುವುದಿಲ್ಲ. ಅದೇ ರೀತಿ ಕೌಟುಂಬಿಕ ವ್ಯವಸ್ಥೆಯನ್ನು ನಡೆಸಲು ಪುರುಷನಿಗೆ ಸ್ತ್ರೀಯರ ಪೈಕಿ ಹೆಚ್ಚು ಅಧಿಕಾರವನ್ನು ನೀಡಲಾಗಿದೆ. ಆದರೆ ಯಾವ ರೀತಿ ಒಬ್ಬ ಸರಕಾರ ಪ್ರಧಾನ ದೇಶದ ಸಂಪುಟದ ಪೈಕಿ ಹೆಚ್ಚು ಅಧಿಕಾರಗಳನ್ನು ಹೊಂದಿರುತ್ತಾನೆ. ಅದರ ಜೊತೆಯಲ್ಲಿ ಹೆಚ್ಚು ಕರ್ತವ್ಯಗಳ್ನು ಸಹ ಹೊಂದಿರುತ್ತಾನೆ. ಅದೇ ರೀತಿ ಇಸ್ಲಾಂ ಧರ್ಮ ಸ್ತ್ರೀಯರ ಪೈಕಿ ಪುರುಷರಿಗೆ ಹೆಚ್ಚು ಹೊಣೆಗಾರಿಕೆಗಳನ್ನು ನೀಡಲಾಗಿದೆ.

ಅಂದ ಹಾಗೆ ಹಕ್ಕುಗಳ ಮತ್ತು ಕರ್ತವ್ಯಗಳ ನೆಲೆಯಲ್ಲಿ ಇಸ್ಲಾಮಿನ ವ್ಯವಸ್ಥೆ ಪ್ರಕೃತಿಗೆ ಅನುಗುಣವಾಗಿದೆ. ಅದರಲ್ಲಿ ಯಾವ ತಾರತಮ್ಯವೂ ಇಲ್ಲ.

**ಪ್ರಶ್ನೆ:** ಮಹಿಳೆಯೊಬ್ಬಳು ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು (ರಾಬಿ) ಅವರ ಚಿಂತನ ಸಭೆಯಲ್ಲಿ ಹೇಳಲಾದ ಒಂದು ಅಧ್ಯಾಪನೆಯ ಮೇರೆಗೆ ಚಿಕ್ಕಪ್ಪ (ಚಚಾ) ಮತ್ತು ಮಾವ ಅವರಿಂದ ಪರದೆ ಮಾಡುವ ವಿಷಯದಲ್ಲಿ ಹುಝೂರ್(ಅಬಿಅ) ಅವರಿಂದ ಮಾರ್ಗದರ್ಶನ ಬಯಸಿದಳು. ಆಗ ಹುಝೂರ್ ಅನ್ವರ್ ಒಂದನೇ ಜೂನ್ 2020 ರ ತನ್ನ ಪತ್ರದಲ್ಲಿ ಈ ಕೆಳಗಿನ ರೀತಿಯಲ್ಲಿ ಉತ್ತರಿಸಿದರು.

**ಉತ್ತರ:** ತಾವು ತಮ್ಮ ಪತ್ರದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು (ರಹ) ರವರ ಯಾವ ಅಧ್ಯಾಪನೆ ಕಡೆ ಬೊಟ್ಟು ಮಾಡಿದ್ದೀರಿ. ಅದು ಸೂರ: ಅನ್ನೂರ್ ವಚನ ಸಂಖ್ಯೆ 32 ಆಗಿದೆ. ಅದು ಸಭೆಯಲ್ಲಿ ಒಂದು ಪ್ರಶ್ನೆಯ ಉತ್ತರವಾಗಿ ಹೇಳಲಾಗಿದೆ.

ಈ ಮಾತು ಸರಿಯಾಗಿದೆ. ಈ ವಚನದಲ್ಲಿ ಪರದೆ ಮಾಡದಂತೆ ನಿರ್ದೇಶಿಸುವ ಸಂಬಂಧಗಳಲ್ಲಿ ಕಾಕ ಮತ್ತು ಮಾಮಾ ಸೇರಿಲ್ಲ. ಆದರೆ ಈ ಎರಡು ಸಂಬಂಧಿಕರ ಪರಿಗಣನೆ ಉತ್ತರಾದಿಕಾರಿಗಳಲ್ಲಿಯೇ ಬರುತ್ತದೆ. ಹುಝೂರ್ ಅವರ ಸಹ ಅದೇ ಮಾತನ್ನೇ ಹೇಳಿರುತ್ತಾರೆ. ಸೂರಃ ಅನ್ನಿಸಾಅನಲ್ಲಿ ವಿವರಿಸಲಾದ ಖುರ್‌ಆನ್‌ನ ಆಜ್ಞೆಗಳಿಂದಲೂ ಈ ಮಾತು ಸಾಬೀತಾಗಿದೆ. ಏಕೆಂದರೆ ಇವರಿಬ್ಬರಿಂದಲೂ ವಿವಾಹ ನಿಷಿದ್ಧವಿದೆ.

ಅಲ್ಲದೇ ಹದೀಸುಗಳಲ್ಲಿ ಹಝ್ರತ್ ಆಯಿಶಾ(ರ) ವರದಿ ಮಾಡಿದ್ದಾರೆ. ಅವರು ಕೇಳಿದ ಪ್ರಯುಕ್ತ ಹುಝೂರ್(ಸ) ಅವರಿಗೆ ಕಾಕ ಅವರಿಂದ ಪರದೆ ಮಾಡದಂತೆ ಆಜ್ಞೆ ನೀಡಿದ್ದರು. ಆದರೆ ಅದರ ಜೊತೆಯಲ್ಲಿಯೇ ಪರದೆ ವಿಷಯದಲ್ಲಿ ಈ ಮಾತನ್ನು ದೃಷ್ಟಿಯಲ್ಲಿರಿಸಿಕೊಳ್ಳಬೇಕಾಗಿದೆ. ಇಸ್ಲಾಮಿ ಶಿಕ್ಷಣದನ್ವಯ ನಿಷೇಧಿತ

**(ಮುಂದುವರಿಯುವುದು)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಅನಂತರ ಹುಝೂರ್ ಅನ್ವರ್[ಅತಬಅ] ವಸತಿ ನಿಲಯಕ್ಕೆ ತೆರಳಿದರು. ಜಲ್ಸಾ ಸಾಲಾನ ಜನಗಳಲ್ಲಿ ಹುಝೂರ್ ಅನ್ವರ್[ಅತಬಅ] ಜಲ್ಸಾ ಸ್ಥಳದ ಒಳಗೆ ತಮ್ಮ ವಸತಿ ಮಾಡಿದ್ದರು.

**ಒಂದನೇ ಸೆಪ್ಟೆಂಬರ್ ಶುಕ್ರವಾರ**

ಹುಝೂರ್ ಅನ್ವರ್[ಅತಬಅ] ಮುಂಜಾನೆ 5:40 ಗಂಟೆಗೆ ಪುರುಷರ ಜಲ್ಸ ಸ್ಥಳದಲ್ಲಿ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್[ಅತಬಅ] ತಮ್ಮ ವಸತಿಯತ್ತ ತೆರಳಿದರು. ಮುಂಜಾನೆ ಹುಝೂರ್ ಅನ್ವರ್[ಅತಬಅ] ಕಚೇರಿ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು.

ಇಂದು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಜರ್ಮನಿಯ 47ನೇ ವಾರ್ಷಿಕ ಸಮ್ಮೇಳನದ ಪ್ರಾರಂಭ ಆಗಬೇಕಾಗಿತ್ತು. ಈ ಸಮ್ಮೇಳನವು ಜರ್ಮನಿಯ ಒಂದು ಶತನಕ ಪೂರ್ಣಗೊಳಿಸುವ ಸಮ್ಮೇಳನವಾಗಿದ್ದರಿಂದ, ಅದೊಂದು ಐತಿಹಾಸಿಕ ಸಮ್ಮೇಳನವಾಗಿತ್ತು ಮತ್ತು ಅದಕ್ಕೆ ಇನ್ನಷ್ಟು ಪ್ರಾಮುಖ್ಯತೆ ದೊರಕಿತ್ತು.

**ಧ್ವಜಾರೋಹಣ ಮತ್ತು ಜುಮುಅ ಖುತ್‌ಬದೊಂದಿಗೆ ಜಲ್ಸ ಸಾಲಾನ ಜರ್ಮನಿಯ ಪ್ರಾರಂಭ:-**

ಕಾರ್ಯಕ್ರಮದನ್ವಯ ಮಧ್ಯಾಹ್ನ 1:55 ಗಂಟೆಗೆ ಹುಝೂರ್ ಅನ್ವರ್[ಅತಬಅ] ಧ್ವಜಾರೋಹನ ನೆರವೇರಿಸಲು ಜಲ್ಸ ಸ್ಥಳದ ವಿವಿಧ ಸಭಾಂಗಣಗಳ ನಡುವೆ ಇರುವ ಮುಕ್ತ ಮೈದಾನದಲ್ಲಿ ಆಗಮಿಸಿದರು.

ಹುಝೂರ್ ಅನ್ವರ್[ಅತಬಅ] ಅಹ್ಮದಿಅತ್‌ನ ಧ್ವಜ ಹಾರೈಸಿದರು. ಅಮೀರ್ ಸಾಹಿಬ್ ಜರ್ಮನಿ, ಜರ್ಮನಿಯ ರಾಷ್ಟ್ರೀಯ ಧ್ವಜ ಆರೋಹಣ ಮಾಡಿದರು, ತದನಂತರ ಹುಝೂರ್ ಅನ್ವರ್[ಅತಬಅ] ದುಆ ಮಾಡಿಸಿದರು.

MTA International ನ ಇಲ್ಲಿಯ ಸ್ಥಳದಿಂದ ನೇರ ಪ್ರಸಾರಗಳು ಮುಂಜಾನೆಯಿಂದಲೇ ಪ್ರಾರಂಭಿಸಲಾಗಿತ್ತು. ಧ್ವಜಾರೋಹನದ ಈ ಸಮಾರಂಭವನ್ನು ಸಹ ಲೋಕದಾದ್ಯಂತ ನೇರವಾಗಿ ಮಾಡಲಾಯಿತು.

ಅನಂತರ ಹುಝೂರ್ ಅನ್ವರ್[ಅತಬಅ] ಪುರುಷರ ಜಲ್ಸ ಸ್ಥಳಕ್ಕೆ ಆಗಮಿಸಿದರು ಮತ್ತು ಜುಮುಅ ಖುತುಬ ಪ್ರಾರಂಭಿಸಿದರು. ಅದರೊಂದಿಗೆಯೇ ಜಲ್ಸ ಸಾಲಾನ ಉದ್ಘಾಟಿಸಲಾಯಿತು.

ಜುಮುಅ ಖುತುಬ ಪುರುಷರ ಜಲ್ಸ ಸ್ಥಳದಲ್ಲಿ ಈ ಕೆಳಗೆ ನಮೂದಿಸಿದ ಭಾಷೆಗಳಲ್ಲಿ ಅನುವಾದಿಸುವ ವ್ಯವಸ್ಥೆ ಮಾಡಲಾಗಿತ್ತು. ಜರ್ಮನ್, ಇಂಗ್ಲೀಷ್, ಅರಬಿ, ಫ್ರಾಂಸಿಸ್, ಬೋಸ್‌ನಿಯನ್, ಬಂಗಾಳಿ, ತುರ್‌ಕಿಶ್, ರಷ್ಯಯನ್, ಬಲ್‌ಗ್ಯಾರಿಯನ್, ಅಲ್‌ಬಾನಿಯನ್, ಸ್ಪಾನಿಷ್.

ಲಜ್ನ (ಮಹಿಳಾ) ಜಲ್ಸ ಸ್ಥಳದಲ್ಲಿ ವೆಬ್ ಸ್ಟ್ರೀಮ್ ಮೂಲಕ ಎಲ್ಲಾ ಭಾಷೆಗಳಲ್ಲಿ ಅನುವಾದದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೇ ಪುರುಷರ ಜಲ್ಸ ಸ್ಥಳದಲ್ಲೂ ರೇಡಿಯೋ ಮತ್ತು ವೆಬ್‌ಸ್ಟ್ರೀಮ್ ಮೂಲಕ ಎಲ್ಲಾ ಭಾಷೆಗಳಲ್ಲಿ ಅನುವಾದದ ವ್ಯವಸ್ಥೆ ಮಾಡಲಾಗಿತ್ತು.

MTA ಮೂಲಕ ಇಲ್ಲಿಂದ ಒಂಭತ್ತು ಭಾಷೆಗಳಲ್ಲಿ ಇಂಗ್ಲೀಷ್, ಅರಬಿ, ಫ್ರೆಂಚ್, ಬಾಂಗ್ಲಾ, ಜರ್ಮನ್, ಇಂಡೋನೇಷಿಯನ್, ರಷಿಯನ್, ಸವಾಹೋಲಿ ಮತ್ತು ಸ್ಪಾನಿಷ್‌ನಲ್ಲಿ ಖುತುಬ ಜುಮುಅ ನೇರವಾಗಿ ಅನುವಾದವಾಗುವ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೇ ಯೋರ್‌ನಾ, ಹಾವುಸ್, ಕಟಕ್, ತಮಿಳು, ಮಲಯಾಳಂ ನಲ್ಲೂ ನೇರವಾಗಿ ಅನುವಾದದ ವ್ಯವಸ್ಥೆ ಮಾಡಲಾಗಿತ್ತು.

2 ಗಂಟೆ 10 ನಿಮಿಷಕ್ಕೆ ಹುಝೂರ್ ಅನ್ವರ್[ಅತಬಅ] ಜುಮುಅ ಖುತುಬ ಪ್ರಾರಂಭಿಸಿದರು. (ಜುಮುಅ ಖುತುಬದ ಸಂಪೂರ್ಣ ಲಿಖಿತ ಖುತುಬ ದಿನಾಂಕ 21 ಸೆಪ್ಟೆಂಬರ್ 2023 ರ ಸಂಚಿಕೆ ಸಂಖ್ಯೆ: 38 ರಲ್ಲಿ ಪ್ರಸಾರಗೊಂಡಿರುತ್ತದೆ. ಹುಝೂರ್ ಅನ್ವರ್[ಅತಬಅ] ಅವರ ಈ ಖುತುಬ ಜುಮುಅ 3 ಗಂಟೆ 13 ನಿಮಿಷದವರೆಗೆ ಜಾರಿಯಲ್ಲಿತ್ತು.

ಖುತುಬ ಜುಮುಅದ ನಂತರ ಹುಝೂರ್ ಅನ್ವರ್[ಅತಬಅ] ಜುಮುಅ ನಮಾಝ್‌ದೊಂದಿಗೆ ಅಸರ್ ನಮಾಝ್ ಜಮಾಗೊಳಿಸಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್[ಅತಬಅ] ತನ್ನ ವಸತಿ ಕಡೆ ಬರಬರುತ್ತಾ ರಸ್ತೆಯಲ್ಲಿ Humanity First Exhibition ನಲ್ಲಿ ಆಗಮಿಸಿದರು.

ಹುಝೂರ್ ಅನ್ವರ್[ಅತಬಅ] ಆ ಕಲುಷಿತ ನೀರಿನ ಬಕೆಟ್ ಬಗ್ಗೆ ಪ್ರಸ್ತಾಪಿಸಿದರು. ಆ ಬಗ್ಗೆ ಹುಝೂರ್ ಅನ್ವರ್[ಅತಬಅ] ಒಂದು ದಿವಸ ಮುಂಚೆಯೇ ನಿರ್ದೇಶನ ನೀಡಿದ್ದರು ಆಗ ಸಾಹಿಬ್ Humanity First ನ ಇನ್‌ಚಾರ್ಜ್ ಸಾಹಿಬ್ ಹೇಳಿದರು. ಆ ಬಕೆಟ್ ವಸ್ತುಪ್ರದರ್ಶನದ ಒಂದು ಭಾಗದಲ್ಲಿ ಇಡಲಾಗಿದೆ. ಇನ್‌ಚಾರ್ಜ್ ಸಾಹಿಬ್ ಮತ್ತು ಹೇಳಿದರು. ನಾವು ಈಗ Funk System ತಯಾರಿಸಿದ್ದೇವೆ. ಏಕೆಂದರೆ Disaster Relief ನಡುವೆಯೂ ಸಂಪರ್ಕ ಸಾಧಿಸಬಹುದಾಗಿದೆ. ಯಾವುದೇ ಕಾರಣದಿಂದ ಟೆಲಿಫೋನ್ ವ್ಯವಸ್ಥೆ ನಿಂತು ಹೋದರೆ ಆಗಲೂ ಈ ವ್ಯವಸ್ಥೆಯನ್ವಯ ಪರಸ್ಪರ ಸಂಪರ್ಕ ಸ್ಥಾಪಿಸಬಹುದು.

ಅನಂತರ ಹುಝೂರ್ ಅನ್ವರ್[ಅತಬಅ] ತಮ್ಮ ವಸತಿಯತ್ತ ತೆರಳಿದರು.

ಕಾರ್ಯಕ್ರಮದನ್ವಯ 9 ಗಂಟೆಗೆ ಹುಝೂರ್ ಅನ್ವರ್ ಜಲ್ಸದೊಳಗೆ ಆಗಮಿಸಿದರು ಮತ್ತು ಮಗ್ರಿಬ್ ಇಶಾ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಂತರ ಹುಝೂರ್ ಅನ್ವರ್ ತಮ್ಮ ವಸತಿಯತ್ತ ತೆರಳಿದರು.

ಮಸ್ಜಿದ್ ಮುಬಾರಕ್ "FLORSTADT ನ ಉದ್ಘಾಟನೆ 28 ಆಗಸ್ಟ್ 2023 ಕ್ಕೆ ಆಗಿತ್ತು. ಕ್ಷೇತ್ರೀಯ ಪ್ರಿಂಟ್ ಮೀಡಿಯಾ ಅದಕ್ಕೆ ಹೀಗೆ coverage ನೀಡಿದ್ದರು.

wetherauen zeitung ಪತ್ರಿಕೆ ತನ್ನ ಸಂಚಿಕೆಯಲ್ಲಿ ಹೀಗೆ ಬರೆಯಿತು: ಹಝ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹಿಬ್ ಮಸ್ಜಿದ್ ಸ್ಥಾಪನೆಯ ಉದ್ದೇಶ ವಿವರಿಸಿದರು. ವಾಸ್ತವವಾಗಿ ಹೇಳಬಹುದಾದರೆ ಮಸೀದಿಯು ವಿವಿಧ ಸಮುದಾಯಗಳಲ್ಲಿ ಮತ್ತು ವಿವಿಧ ಧರ್ಮಗಳ ಜನರ ನಡುವೆ ಶಾಂತಿ ಉಂಟಾಗುವಂತಾಗಬೇಕು. ಈ ಪತ್ರಿಕೆಯು ಒಂದು ಲಕ್ಷ 12 ಸಾವಿರ ಜನರವರೆಗೆ ತಲುಪುತ್ತದೆ.

ಅದಲ್ಲದೆ Kmeis Amzeigen ಪತ್ರಿಕೆ ಮತ್ತು Frankfurten Neue Presse ಪತ್ರಿಕೆಗಳು ಸಹ ಮಸೀದಿಯ ಉದ್ಘಾಟನೆ ಕುರಿತು ಸುದ್ದಿ ನೀಡಿದ್ದರು. ಈ ಎರಡೂ ಪತ್ರಿಕೆಗಳ ಪ್ರಕಟಣೆ 74,300 ಆಗಿದೆ. ಈ ರೀತಿ ಒಟ್ಟಿನಲ್ಲಿ ಈ ಮೂರು ಪತ್ರಿಕೆಗಳ ಪ್ರಸಾರ ಒಂದು ಲಕ್ಷ 86 ಸಾವಿರ 300 ಆಗಿದೆ.

ಅದಲ್ಲದೇ TV HR-Fernshen ನ ಕಾರ್ಯಕ್ರಮ Hessenschau ನಲ್ಲಿ ಮಸೀದಿಯ ಉದ್ಘಾಟನಾ ನಿಮಿತ್ತ ಈ ಕೆಳಗಿನಂತೆ ಸುದ್ದಿ ಪ್ರಸಾರ ಮಾಡಲಾಗಿತ್ತು.

Florstadt ನಗರದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ಉದ್ಘಾಟನಾ ಸಮಯದಲ್ಲಿ ಉನ್ನತ ಮಟ್ಟದ ಅತಿಥಿಗಳು ಆಗಮಿಸಿದ್ದರು. ಖಲೀಫರಾದ ಹಝ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹಿಬ್ ಮಸೀದಿಯನ್ನು ಉದ್ಘಾಟಿಸಿದರು. ಕೆಲವು ತಿಂಗಳುಗಳ ಹಿಂದೆ ಅಷ್ಟೇ ಈ ಮಸೀದಿ ಪೂರ್ಣಗೊಂಡಿತ್ತು.

ಲೋಕದಾದ್ಯಂತದಿಂದ 10 ಮಿಲಿಯನ್‌ಗಿಂತ ಹೆಚ್ಚು ಮುಸ್ಲಿಮರ ಆಧ್ಯಾತ್ಮಿಕ ನೇತಾರರು ಇಂದಿನ ದಿನಗಳಲ್ಲಿ ಜಲ್ಸ ಸಾಲಾನ ಉದ್ದೇಶವಾಗಿ ಈ ವಾರದಲ್ಲಿ Stuttgart ನಲ್ಲಿ ಆಯೋಜಿಸಲಾದ ಸ್ಥಳಕ್ಕೆ ಆಗಮಿಸಿದ್ದಾರೆ.

ಬುಧವಾರ ದಿನದಂದು Karben ನಗರದಲ್ಲಿ ಖಲೀಫರು ಇನ್ನೊಂದು ಮಸೀದಿ ಉದ್ಘಾಟಿಸಲಿದ್ದಾರೆ.

ಮಸ್ಜಿದ್ ಸಾದಿಖ್ Karben ಉದ್ಘಾಟನಾ ನಿಮಿತ್ತ Frankfurter Neue press ಪತ್ರಿಕೆ ಈ ಕೆಳಗಿನಂತೆ ಸುದ್ದಿ ನೀಡಿದೆ. ಖಲೀಫ ಸಾಹಿಬ್ ಈ ಮಾತನ್ನು ದೃಢಪಡಿಸಿದರು. ಪ್ರತಿಯೊಬ್ಬ ಧರ್ಮವು ಶಾಂತಿಗಾಗಿ ಪ್ರಯತ್ನಿಸಬೇಕಾಗಿದೆ. ನಮ್ಮ ಪ್ರವಾದಿಗಳೆಲ್ಲರೂ ಅದೇ ಶಿಕ್ಷಣ ನೀಡಿದೆ, ಅದೇನೆಂದರೆ ದೇವನೊಡನೆ ಸಂಬಂಧ ಸ್ಥಾಪಿಸಬೇಕು ಮತ್ತು ಶಾಂತಿ ಪ್ರೀತಿಯಿಂದ ಜೀವನ ನಡೆಸಬೇಕು. ಮತ್ತು ಅವರು ಹೇಳಿದರು. "ಇಸ್ಲಾಮಿನ ನಿಜವಾದ ಚಿತ್ರ ನಮ್ಮ ಮಸೀದಿಗಳಲ್ಲಿ ಕಾಣಬಹುದು. ಮತ್ತು ನಾವು ಅದನ್ನು ನಮ್ಮ ನಡವಳಿಕೆಗಳ ಮೂಲಕ ತೋರಿಸಬಯಸುತ್ತೇವೆ."

ಈ ಪತ್ರಿಕೆಯ ಪ್ರಸಾರ ಸುಮಾರು 50 ಸಾವಿರವಾಗಿದೆ.

**2 ಸೆಪ್ಟೆಂಬರ್ 2023 ಶನಿವಾರ**

ಹುಝೂರ್ ಅನ್ವರ್[ಅತಬಅ] ಮುಂಜಾನೆ 5.40 ಕ್ಕೆ ಪುರುಷರ ಜಲ್ಸ ವೇದಿಕೆಗೆ ಬಂದು ನಮಾಝ್ ಫಜರ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ಅನ್ವರ್[ಅತಬಅ] ತಮ್ಮ ವಸತಿಯತ್ತ ತೆರಳಿದರು.

ಇಂದು ಕಾರ್ಯಕ್ರಮದನ್ವಯ ಲಜ್ನ (ಮಹಿಳಾ) ಜಲ್ಸ ಸ್ಥಳದಲ್ಲಿ ಹುಝೂರ್ ಅನ್ವರ್[ಅತಬಅ] ಭಾಷಣ ಮಾಡಲಿದ್ದರು.

ಕಾರ್ಯಕ್ರಮದಂತೆ 12:10 ಕ್ಕೆ ಹುಝೂರ್ ಅನ್ವರ್[ಅತಬಅ] ವೇದಿಕೆಗೆ ಆಗಮಿಸಿದರು. ನಾಝಿಮ ಆಲ ಹಾಗೂ ಸದರ್ ಲಜ್ನ ಇಮಾಉಲಾಹ್ ಜರ್ಮನಿ, ತಮ್ಮ ನಾಝಿಮಾತ್ ಆಲ ಜೊತೆಗೂಡಿ ಹುಝೂರ್ ಅನ್ವರ್[ಅತಬಅ] ಅವರನ್ನು ಸ್ವಾಗತಿಸಿದರು. ಮಹಿಳೆಯರೆಲ್ಲರೂ ಉತ್ಸಾಹಪೂರ್ಣ ರೀತಿಯಲ್ಲಿ ಶುಭಾಗಮನ ಕೋರಿದರು.

ಅಧಿವೇಶನ ಪ್ರಾರಂಭವು ಪವಿತ್ರ ಖುರ್‌ಆನ್ ಪಾರಾಯಣದೊಂದಿಗೆ ಆಯಿತು. ಅದನ್ನು ಅಝೀಝು ನಾಶೀನ್ ಇಸ್ಲಾಂ ಸಾಹಿಬಾ ನೆರವೇರಿಸಿದರು. ನಂರ ಅಧರ್ ಉರ್ದು ಅನುವಾದ ಆಯಿತು. ಹುಮಾ ಮಾರುಲ್

**(ಮುಂದುವರಿಯುವುದು)**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಕಚ್ಚೇರಿಗಳಲ್ಲಿ ಸೇವೆಸಲ್ಲಿಸಲು ಬಯಸುವವರು ಗಮನಹರಿಸಿರಿ

**ಎರಡನೇ ದರ್ಜೆಯ ಪೋಸ್ಟ್‌ಗಾಗಿ ಷರತ್ತುಗಳು**

(1) ಅಭ್ಯರ್ಥಿಯ ವಯಸ್ಸು 25 ವರ್ಷಗಳಿಗಿಂತ ಹೆಚ್ಚು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು (2) ಅಭ್ಯರ್ಥಿಯು 45% ಅಂಕಗಳೊಂದಿಗೆ ಕನಿಷ್ಠ 10+2 ರ ಶೈಕ್ಷಣಿಕ ಅರ್ಹತೆಯನ್ನು ಹೊಂದಿರಬೇಕು (3) ಅಭ್ಯರ್ಥಿಯು ಉರ್ದು/ಇಂಗ್ಲಿಷ್ ಕಮ್ಪ್ಯೋಝಿಂಗ್ ತಿಳಿದಿರಬೇಕು ಮತ್ತು ವೇಗದ ಮಿತಿ ಪ್ರತಿ ನಿಮಿಷಕ್ಕೆ 25 ಪದಗಳಾಗಿರಬೇಕು (4) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.

ಎರಡನೇ ದರ್ಜೆಯವರಿಗೆ ಪರೀಕ್ಷೆ ಕೆಳಕಂಡಂತೆ ಪಠ್ಯಕ್ರಮದಂತೆ ಇರುತ್ತದೆ. ಪರೀಕ್ಷೆಯ ಪ್ರತಿ ಭಾಗದಲ್ಲೂ ಉತ್ತೀರ್ಣ ಆಗುವುದು ಕಡ್ಡಾಯವಾಗಿರುತ್ತದೆ.

**ಭಾಗ-1:** * ಪವಿತ್ರ ಖುರ್‌ಆನ್ ನಾಝಿರ ಪೂರ್ಣ, ಅನುವಾದದೊಂದಿಗೆ ಮೊದಲ ಭಾಗ * ಚಾಲೀಸ್ ಜವಾಹಿರ್ ಪಾರೆ. ಅರ್ಕಾನೆ ಇಸ್ಲಾಮ್, ಸಂಪೂರ್ಣ ನಮಾಝ್ ಅನುವಾದದೊಂದಿಗೆ. **(30 ಸಂಖ್ಯೆಗಳು)**

**ಭಾಗ-2:** ಕಶ್ತಿ ನೂಹ್, ಬರಕಾತುದ್ದುಆ, ದೀನೀ ಮಾಲೂಮಾತ್ * ಪ್ರಬಂಧ ಅಹ್ಮದೀಯ ಜಮಾತ್‌ನ ನಂಬಿಕೆಗಳು * ನಝುಮ್ ದುರ್ರೆ ಸಮೀನ್ (ಶಾನ್ ಇಸ್ಲಾಂ). **(20 ಅಂಕಗಳು)**

**ಭಾಗ-3:** ಇಂಗ್ಲಿಷ್ ಪದವಿ ಪೂರ್ವ ಶಿಕ್ಷಣದ (10+2) ಮಾನದಂಡದ ಪ್ರಕಾರ. **(20 ಅಂಕಗಳು)**

**ಭಾಗ-4:** ಮೆಟ್ರಿಕ್ ಮಾನದಂಡದ ಪ್ರಕಾರ ಅಂಕಗಣಿತ (ಆಫೀಸ್ ಇಂಪ್ರೆಸ್‌ಗೆ ಸಂಬಂಧಿಸಿದ ಪ್ರಶ್ನೆಗಳು). **(20 ಅಂಕಗಳು)**

**ಭಾಗ-5:** ಸಾಮಾನ್ಯಜ್ಞಾನ (ಜಿ.ಕೆ) **(10 ಅಂಕಗಳು)**

(6) ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಮತ್ರ ಸಂದರ್ಶಿಸಲಾಗುವುದು (7) ಲಿಖಿತ ಪರೀಕ್ಷೆ, ಕಂಪ್ಯೂಟರ್ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಯಶಸ್ಸಿನ ಸಂದರ್ಭದಲ್ಲಿ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯನ್‌ನಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾಗಬೇಕಾಗುತ್ತದೆ ಮತ್ತು ನೂರ್ ಆಸ್ಪತ್ರೆ ಸಮಿತಿಯ ವರದಿಯ ಪ್ರಕಾರ ಯಾರು ಆರೋಗ್ರವಂತಿರುತ್ತಾರೊ ಆ ಅಭ್ಯರ್ಥಿಗಳು ಮಾತ್ರ ಸೇವೆಸಲ್ಲಿಸಲು ಅರ್ಹರಾಗಿರುತ್ತಾರೆ. (8) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಖಾದಿಯಾನ್‌ನಲ್ಲಿ ತನ್ನ ಸ್ವಂತ ವಸತಿಯನ್ನು ವ್ಯವಸ್ಥೆಗೊಳಿಸಬೇಕಾಗುತ್ತದೆ, ವಸತಿಗೆ ಸಂಬಂಧಿಸಿದಂತೆ ನಂತರ ಸ್ವೀಕರಿಸಿದ ಅರ್ಜಿಯ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ. (9) ಖದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ.

**(ಗಮನಿಸಿ: ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕವನ್ನು ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)**

***ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:***

ನಝಾರತ್ ದೀವಾನ್ ಸ್ರ್ ಅಂಜುಮನ್ ಅಹ್ಮದಿಯಾ
ಖಾದಿಯಾನ್-143516, ಮೊಬೈಲ್: 09682627592,
09682587713,
ಕಛೇರಿ: 01872-501130, ಇ-ಮೇಲ್: diwan@qadian.in

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

**MUSLIM TELEVISION AHMADIYYA INTERNATIONAL**
**www.mta.tv**

"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**M.B. Nasir Ahmed & Family, Bengaluru, Karnataka**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನ ಡ್ರೈವರ್ ಹುದ್ದೆಗೆ ಘೋಷಣೆ
### ಷರತ್ತುಗಳು

(1) ಅಭ್ಯರ್ಥಿಯ ವಯಸ್ಸು 18 ವರ್ಷಕ್ಕಿಂತ ಹೆಚ್ಚು ಮತ್ತು 40 ವರ್ಷಕ್ಕಿಂತ ಕಡಿಮೆ ಇರಬೇಕು. (2) ಅಭ್ಯರ್ಥಿಯು ಕನಿಷ್ಠ 10ನೇ ತರಗತಿ ತೇರ್ಗಡೆ ಹೊಂದಿರಬೇಕು. (3) ಅಭ್ಯರ್ಥಿಯು ಮಾನ್ಯವಾದ ನಾಲ್ಕು ಚಕ್ರದ ಚಾಲನಾ ಪರವಾನಗಿಯನ್ನು ಹೊಂದಿರಬೇಕು. (4) ಅಭ್ಯರ್ಥಿಯು ಸರ್ಕಾರಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಕನಿಷ್ಠ 2 ವರ್ಷಗಳ ಚಾಲನಾ ಅನುಭವವನ್ನು ಹೊಂದಿರುವುದು ಅವಶ್ಯಕ. ಅದೇ ರೀತಿ ಅಭ್ಯರ್ಥಿಯು ತನ್ನ ಅರ್ಜಿಯೊಂದಿಗೆ ಅಭ್ಯರ್ಥಿಯು ಅನುಭವವನ್ನು ಪಡೆದಿರುವ ಸಂಸ್ಥೆಯ ಅನುಭವ ಪ್ರಮಾಣಪತ್ರವನ್ನು (Experience Certificate) ಸಲ್ಲಿಸುವುದು ಸಹ ಕಡ್ಡಾಯವಾಗಿದೆ. (5) ಅಭ್ಯರ್ಥಿಯು ತನ್ನ ಜನ್ಮ ಪ್ರಮಾಣಪತ್ರವನ್ನು (Birth Certificate) ಸಲ್ಲಿಸುವುದು ಅವಶ್ಯಕ. (6) ಅಭ್ಯರ್ಥಿಯು ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣ ಆಗಬೇಕು. (7) ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಚಾಲನಾ ಪರೀಕ್ಷೆಯನ್ನು (Driving Test) ಸಹ ನೀಡಲಾಗುತ್ತದೆ. (8) ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾಜುಥಿಂನ್‌ನಿಂದ ವೈದ್ಯಕೀಯ ಫಿಟ್‌ನೆಸ್ ಪ್ರಮಾಣಪತ್ರದ ಪ್ರಕಾರ ಫಿಟ್ ಮತ್ತು ಆರೋಗ್ಯವಂತರಾಗಿರಬೇಕು. (9) ನೇಮಕಾತಿಯ ನಂತರ ಅಭ್ಯರ್ಥಿ ಚಾಲಕನಿಗೆ ಗ್ರೇಡ್-2 ಗೆ ಸಮಾನವಾದ ಭತ್ಯೆ ಮತ್ತು ಇತರ ಸೌಲಭ್ಯಗಳನ್ನು ನೀಡಲಾಗುವುದು. (10) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಗಳು ಮೊದಲ ಐದು ವರ್ಷಗಳ ಕಾಲ ಖಾದಿಯಾನ್‌ನಲ್ಲಿ ತಮ್ಮ ಸ್ವಂತ ವಸತಿಯ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. (11) ಖಾದಿಯಾನ್ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಗಿರುತ್ತದೆ.

**ಗಮನಿಸಿ: ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ, ಸಂದರ್ಶನ ಮತ್ತು ಡ್ರೈವಿಂಗ್ ಪರೀಕ್ಷೆಯ ದಿನಾಂಕವನ್ನು ನಂತರ ತಿಳಿಸಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ
ಖಾದಿಯಾನ್-143516
ಮೊಬೈಲ್: 09888232530, 09682627592,
ಕಛೇರಿ: 01872-501130
ಇ-ಮೇಲ್: diwan@qadian.in

**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:**
**https://akhbarbadr.in/Kannada/#gsc.tab=0**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2024 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

"ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ."
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 24 October 2024, Issue No. 43

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಷ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-42ರ ಉಳಿದ ಭಾಗ ಮುಂದುವರಿಸಲಾಗಿದೆ)*

## ಹುಝೂರ್ ಅನ್ವರ್(ಅತಬಅ) ರವರ ಭಾಷಣ
## ಕರ್ತವ್ಯಪಾಲಕರ ಸಭೆ ಜಲ್ಸ ಸಾಲಾನ ಜರ್ಮನಿ 2023

ತಸ್ಮೀಯ ನಂತರ ಹುಝೂರ್ ಅನ್ವರ್(ಅತಬಅ) ಹೇಳಿದರು: ಅಲ್ಲಾಹನ ತುಂಬಾ ಕೃಪೆ ಉಪಕಾರ ನಮ್ಮ ಮೇಲಿದೆ. ಒಂದು ದೀರ್ಘ ಅವಧಿಯ ನಂತರ ಜರ್ಮನಕಿ ಜಮಾಅತ್‌ಗೆ ಮತ್ತೊಮ್ಮೆ ವಿಶಾಲ ನೆಲೆಯಲ್ಲಿ ಜಲ್ಸ ಆಚರಿಸುವ ಭಾಗ್ಯ ದೊರೆಯುತ್ತದೆ. ಇಲ್ಲಿ ಸ್ಥಳದ ಸಮಸ್ಯೆಯಿತು. ಆದರೆ ಅಲ್ಲಾಹನು ಕರುಣಿಸಿದನು ಮತ್ತು ಒಂದು ಸ್ಥಳ ದೊರೆಯಿತು. ಮುಂದೆಯೂ ಭರವಸೆ ಇದೆ. ಜರ್ಮನಿ ಜಮಾಅತ್ ಪ್ರಯತ್ನಪಡುತ್ತದೆ ಎಂದು. ಆಗ ಇನ್ನೂ ಅಧಿಕ ಸವಲತ್ತಿನಿಂದ ಮತ್ತು ಸ್ವತಂತ್ರ ರೀತಿಯಲ್ಲಿ ಕಾರ್ಯಕ್ರಮಗಳನ್ನು ನಡೆಸಬಹುದಾಗಿದೆ. ಆದರೆ ಗೇಗೂ ಅಲ್ಲಾಹನು ಜಾಗ ಒದಗಿಸಿಕೊಟ್ಟಿದ್ದಾನೆ. ತುಂಬಾ ವಿಶಾಲವಾದ ಕ್ಷೇತ್ರವಿದೆ. ಕ್ಷೇತ್ರವು ವಿಶಾಲವಾಗಿದ್ದರಿಂದ ಕರ್ತವ್ಯಪಾಲಕರ ಜವಾಬ್ದಾರಿಯು ಹೆಚ್ಚುತ್ತದೆ. ವಿಶೇಷವಾಗಿ ರಕ್ಷಣಾ ಸಿಬ್ಬಂದಿ ಅವರಿಗೆ ಇಷ್ಟೊಂದು ವಿಶಾಲ ಕ್ಷೇತ್ರ ನೋಡಿಕೊಳ್ಳಬೇಕು ಎಂದರೆ ಕಷ್ಟಸಾಧ್ಯವಾಗುತ್ತದೆ. ಜಾಗ್ರತೆವಹಿಸಬೇಕಾಗುತ್ತದೆ. ಇತ್ತೀಚೆಗೆ ಮುಸ್ಲಿಮರ ಬಗ್ಗೆ ಜನರ ಭಾವನೆಗಳು ಸರಿಯಿಲ್ಲ. ಆ ನೆಲೆಯಲ್ಲೂ ಸಮಸ್ಯೆಯಾಗಬಹುದು. ಇಲ್ಲಿ ಇರುವ ಮುಸ್ಲಿಮರು ನಮ್ಮ ಜಮಾಅತಿಗೆ ವಿರೋಧವಿದೆಯಾದರೂ ಅವರಿಂದಲೂ ಸಮಸ್ಯೆ ಬರಬಹುದು. ಆದ್ದರಿಂದ ರಕ್ಷಣೆ ಕಾರ್ಯ ಮಾಡುವವರು ತುಂಬಾ ಜಾಗರೂಕತೆಯಿಂದ ಕೆಲಸ ನಿರ್ವಹಿಸಬೇಕಾಗಿದೆ.

ಬೇರೆ ವಿಷಯವೇನೆಂದರೆ ತುಂಬಾ ವಿಶಾಲ ರೀತಿಯಲ್ಲಿ ನಿಮಗೆ ಅತಿಥಿಸತ್ಕಾರ ಮಾಡುವ ಅವಕಾಶ ದೊರೆಯುತ್ತದೆ. ಊಟ ತಯಾರಿಸುವವರು ಊಟ ತಯಾರಿಸಬಹುದು. ಅದರಲ್ಲಿ ಜಿಪುಣತೆ ಮಾಡಲಿಕ್ಕಿಲ್ಲ ಎಂಬ ಭರವಸೆ ನನಗಿದೆ. ಅಂದಾಜಿನ ಪ್ರಕಾರ ಊಟ ಮಾಡಬಹುದು ಮತ್ತು ಪ್ರತಿಯೊಬ್ಬರಿಗೆ ಊಟ ಸಿಗುವಂತಾಗಬೇಕಾಗಿದೆ. ಊಟ ಬಳಸುವವರ ನೀತಿವಂತರಾಗಿ ಪ್ರತಿಯೊಬ್ಬರಿಗೆ ಸಂತುಷ್ಟಗೊಳಿಸುವ ರೀತಿಯಲ್ಲಿ ಸೇವೆ ಮಾಡಬೇಕು. ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ನೋಡಿಕೊಳ್ಳಬೇಕು.

ಹುಝೂರ್ ಅನ್ವರ್(ಅತಬಅ) ಹೇಳಿದರು. ಯು.ಕೆ ಜಲ್ಸದಲ್ಲಿ ನಾನು ಕಾರ್ಯಕರ್ತರಿಗೆ ಹೇಳಿದ್ದೆ, ಪ್ರತಿಯೊಬ್ಬರು ಸದಾ ಮುಗುಳ್ನಗುವಿನೊಂದಿಗೆ ಸೇವೆ ಮಾಡಬೇಕು, ಅದೇ ಮಾತು ನಿಮಗೂ ಹೇಳುತ್ತಿದ್ದೇನೆ. ಕೆಲವೊಮ್ಮೆ ಶಾಂತಿ ಭಂಗವಾಗುವಂತಹ ಪರಿಸ್ಥಿತಿ ಉಂಟಾಗುತ್ತದೆ. ಆದರೆ ಇಂತಹ ಪರಿಸ್ಥಿತಿಯಲ್ಲಿ ತುಂಬಾ ತಾಳ್ಮೆ ಸಹನೆ ವಹಿಸಬೇಕು. ಹೀಗೆ ಪರಿಸ್ಥಿತಿಯನ್ನು ನಿಭಾಯಿಸಬಹುದಾಗಿದೆ.

ಹುಝೂರ್ ಅನ್ವರ್(ಅತಬಅ) ಹೇಳಿದರು. ರಕ್ಷಣಾ ವ್ಯವಸ್ಥೆ ಬಗ್ಗೆ ಮೊದಲೇ ಮಾತನಾಡಿದ್ದೆ, ಈಗ ಮಹಿಳೆಯರ ಕುರಿತು ಹೇಳಬಯಸುತ್ತೇನೆ, ಕೆಲವೊಮ್ಮೆ ಬರುವ ಮಹಿಳೆಯರು, ಕೆಲವು ಪುರುಷರು ಆತಂಕ ಒಡ್ಡುತ್ತಾರೆ, ಇಲ್ಲಿ ತುಂಬಾ ವಿನಯದಿಂದ ವರ್ತಿಸಬೇಕಾಗುತ್ತದೆ. ಬೈತುಸ್ಸುಬೂಹ್‌ನಲ್ಲಿ ನವಾಝ್ ಮಾಡುವಾಗ ಮತ್ತು ಭೇಟಿ ಮಾಡುವ ನಡುವೆ ಜನರು ಬರುತ್ತಾರೆ, ಅಲ್ಲಿ ತಪಾಸಣೆ ನಡೆದಿತ್ತು, ಒಬ್ಬಾಕೆಯದು ದೂರು ಬಂತು. ನನಗೆ ದೂರಲಾಯಿತು. ಮತ್ತು ತಪಾಸಣೆ ಮಾಡುವವರು ನನ್ನೊಡನೆ ಸರಿಯಾಗಿ ವರ್ತಿಸಲಿಲ್ಲ. ಈ ಬಗ್ಗೆ ಗಮನ ನೀಡಬೇಕು. ಜಾಗ್ರತೆವಹಿಸಬೇಕು. ತಮ್ಮ ಕಾರ್ಯದಲ್ಲಿ ಪೂರ್ಣ ರೀತಿಯಲ್ಲಿ ಗಮನಹರಿಸಬೇಕು. ಆದರೆ ಅದರ ಜೊತೆಯಲ್ಲಿ ಉತ್ತಮ ನಡತೆಯು ಹೊಂದಿರಬೇಕು. ತಪಾಸಣೆ ಮಾಡಿದರು. ಮೃದು ರೀತಿಯಲ್ಲಿ ಪ್ರೀತಿ ಪ್ರೇಮದಿಮದ ಯಾರಿಗೂ ದೂರುಕೊಡುವ ಅವಕಾಶ ನೀಡಬಾರದು.

ಹುಝೂರ್ ಅನ್ವರ್(ಅತಬಅ) ನುಡಿದರು:- ಅಲ್ಲಾಹನ ಅನುಗ್ರಹದಿಂದ ಜಲ್ಸಾದ ಸಿದ್ಧತೆ ಎನಾಗಿದೆ. ಅದು ಸಾಬೀತುಗೊಳಿಸಿದೆ. ನಾಲ್ಕು ವರ್ಷದ ಅವಧಿಯ ನಂತರ ಬಹುಶಃ ಇಷ್ಟು ಉತ್ತಮ ರೀತಿಯಲ್ಲಿ ಸಿದ್ಧತೆ ಆಗಲಿಕ್ಕಿಲ್ಲ ಎಂಬ ಭಯವಿತ್ತು. ಅದು ದೂರವಾಗಿದೆ ಮತ್ತು ಕಾರ್ಯಕರ್ತರಾದ ಖುದ್ದಾಂ ಅನ್ಸಾರ್ ಮತ್ತು ಜಮಾಅತಿನ ಸದಸ್ಯರು ಸೇರಿ ಜಲ್ಸಾ ಗಾಹ್‌ವನ್ನು ಸಿದ್ಧಗೊಳಿಸಿದ್ದಾರೆ. ಅಲ್ಲಾಹನ ಅನುಗ್ರಹದಿಂದ ನೀವು ತನ್ನ ಕಾರ್ಯವನ್ನು ಮರೆತಿಲ್ಲ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಮುಂದೆ ಯುವಕರಾಗುವ ಈ ಮಕ್ಕಳು ನಿಮ್ಮಿಂದ ಕಲಿಯಬಹುದಾಗಿದೆ. ಇನ್ಶಾ ಅಲ್ಲಾಹ್ ತಾಲಾ, ಇದು ಒಂದು ಜನಾಂಗದ ನಂತರ ಇನ್ನೊಂದು ಜನಾಂಗಕ್ಕೆ ಸ್ಫೂರ್ತಿದಾಯಕವಾಗಿದೆ. ಆತ್ಮೀಯವಾಗಿ ಮಾಡುವ ಜಮಾಅತಿಗೋಸ್ಕರ ಮಾಡುವ ಭಾವನೆಗಳು ಮುಂದಿನ ಪೀಳಿಗೆಯಲ್ಲೂ ಬರಬಹುದಾಗಿದೆ. ಅಲ್ಲಾಹನು ನಿಮಗೆಲ್ಲರಿಗೂ ಈ ಭಾಗ್ಯ ದಯಪಾಲಿಸಲಿ. ಅದು ಯಾವುದೇ ಕರ್ತವ್ಯವಾಗಲಿ, ಅದು ಪಾರ್ಕಿಂಗ್ ಕೆಲಸವಾಗಲಿ, ತರಬೇತಿಯ ಕೆಲಸವಾಗಲೀ ಅಥವಾ ಬೇರೆ ಯಾವುದೇ ವಿಭಾಗದ ಕೆಲಸವಾಗಲಿ ಎಲ್ಲರಲ್ಲೂ ತನ್ನ ಸಂಪೂರ್ಣ ಸಾಮರ್ಥ್ಯದೊಂದಿಗೆ ಕರ್ತವ್ಯ ನಿರ್ವಹಿಸಬೇಕು. ಮತ್ತು ಸದಾ ನೆನಪಿರಲಿ. ನೀವು ಮುಗುಳು ನಗೆಯೊಂದಿಗೆ ಅತಿಥಿಗಳ ಸೇವೆ ಮಾಡಬೇಕು. ಅಲ್ಲಾಹನು ನಿಮಗೆ ಅದರ ಭಾಗ್ಯ ದಯಪಾಲಿಸಲಿ. ಆಮೀನ್. ದುಆ ಮಾಡೋಣ.

ಭಾಷಣದ ನಂತರ ಹುಝೂರ್ ಅನ್ವರ್(ಅತಬಅ) ದುಆ ಮಾಡಿಸಿದರು.

ಆನಂತರ ಒಂಭತ್ತು ಗಂಟೆ ಇಪ್ಪತ್ತು ನಿಮಿಷಕ್ಕೆ ಹುಝೂರ್ ಅನ್ವರ್(ಅತಬಅ) ಮಗರಿಬ್ ಮತ್ತು ಇಶಾ ನಮಾಝ್ ಅನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು.

ನಮಾಝ್ ಆದನಂತರ ತನ್ನ ವಸತಿಯತ್ತ ಹೋಗುವಾಗ ಹುಝೂರ್ ಅನ್ವರ್(ಅತಬಅ) ಒಂದೇ ಸ್ಥಳದಲ್ಲಿ ನಿಂತು ಮೇಲಂತಸ್ತಿನಿಂದ HUMANITY FIRST EXHIBITION ಅನ್ನು ವೀಕ್ಷಿಸಿದರು. ಹುಝೂರ್ ಅನ್ವರ್(ಅತಬಅ) ಅಮಿರ್ ಸಾಹೇಬ್ ಜರ್ಮನಿ ಅವರನ್ನು HUMANITY FIRST ಕಾರ್ಯಗಳಲ್ಲಿ ಸಹಾಯ ನೀಡಲು ನಿರ್ದೇಶಿಸಿದರು. ಹುಝೂರ್ ಅನ್ವರ್(ಅತಬಅ) ಹೇಳಿದರು, HUMANITY FIRST ಖಲೀಫತುಲ್ ಮಸೀಹ್ ಅವರ ನಿರ್ದೇಶನದ ಮೇರೆಗೆ ಸ್ಥಾಪಿತಗೊಂಡ ಸಂಘಟನೆಯಾಗಿದೆ. ಮತ್ತು ಖಲೀಫರ ಆಶಯ ಹಾಗೂ ನಿರ್ದೇಶನದ ಮೇರೆಗೆ ಇಲ್ಲಿ ಕೆಲಸ ಮಾಡುತ್ತಿದ್ದೀರಿ.

ಇನ್‌ಚಾರ್ಜ್ HUMANITY FIRST ಜರ್ಮನಿ ಅವರು ಹುಝೂರ್ ಅನ್ವರ್(ಅತಬಅ)ರ ಸೇವೆಯಲ್ಲಿ ಹೇಳಿದರು. ನಾವು ಮಾಡಿದ್ದೆಲ್ಲ Merchendise ಸ್ವಯಂ ತಯಾರಿಸಿದ್ದೇವೆ. ಸ್ವಯಂ ಮಶೀನ್ ಕೊಂಡುಕೊಂಡಿದ್ದೇವೆ. ಲೇಸರಿನ ಮಶೀನ್ ಸಹ ತೆಗೆದುಕೊಂಡಿದ್ದೇವೆ.

ಆಗ ಹುಝೂರ್ ಅನ್ವರ್(ಅತಬಅ) ಹೇಳಿದರು: ನೀವು ಅದ್ಭುತವಾದ ಕೆಲಸವನ್ನು ಮಾಡಿದ್ದೀರಿ. ಸ್ವಯಂ ತಯಾರಿಸಿದ್ದೀರಿ ಎಂದರೆ ಅದು ತುಂಬಾ ಒಳ್ಳೆಯ ಮಾತಾಗಿದೆ. ಹುಝೂರ್ ಅನ್ವರ್(ಅತಬಅ) ಇನ್‌ಚಾರ್ಜ್ ಸಾಹೆಬರಿಗೆ ನಿರ್ದೇಶನ ನೀಡಿದರು. WATER FOR LIFE ಅನ್ವಯ ಒಂದು ಕಲುಷಿತ ನೀರಿನ ಬಕೇಟ್ ತಮ್ಮ EXHIBITION ನಲ್ಲಿ ಇರಿಸಿರಿ. ಏಕೆಂದರೆ ಜನರಿಗೆ ತಿಳಿಯುವಂತಾಗಲಿ. ಆಫ್ರೀಕಾದ ಕೆಲವು ಕ್ಷೇತ್ರಗಳಲ್ಲಿ ಜನರು ಈ ರೀತಿಯ ಕಲುಷಿತ ನೀರನ್ನು ಕುಡಿಯುತ್ತಾರೆ. ಇದರಿಂದ ಮೊದಲನೆಯದಾಗಿ ಕೃತಜ್ಞತಾ ಭಾವ ಉಂಟಾಗುವುದು. ಎರಡನೆಯದಾಗಿ ಜನರಲ್ಲಿ ಸೇವಾಭಾವ ಉಂಟಾಗುವುದು.

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.